CC-0. In Public Domain. Digitized by eGangotri

ಕರ್ನಾಟಕದಲ್ಲಿ

ವಯಸ್ಕರ ಶಿಕ್ಷಣ

· ಟಿ.ಆರ್.ನಾಗಪ್ಪ



Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

416

ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ

ಟಿ. ಆರ್. ನಾಗಪ್ಪ

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು–560 009

Sri Vidyabharathi Book Centre, Sringeri

CC-O. In Public Domain. Digitized by eGangotri

KARNATAKADALLI VAYASKARA SIKSHANA—A monograph on the Adult Literacy Movement in Karnataka written in Kannada by T. R. Nagappa. Published by P. N. Kamat, IBH Prakashana, Gandhinagar, Bangalore-560 009.

ಬೆಲೆ ರೂ. 2-00

Copyright © 1980 by the Publisher.

ಚಿತ್ರಗಳು : ಮನೋಹರ್

ಮೊದಲ ಮುದ್ರಣ : 1980. ಪ್ರಕಾಶಕರು : ಪಿ. ಎನ್. ಕಾಮತ್ ಐಬಿಎಚ್ ಪ್ರಕಾಶನ ಐದನೆಯ ಮುಖ್ಯರಸ್ತೆ ಗಾಂಧಿನಗರ ಬೆಂಗಳೂರು 560 009 ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054.

Paper used for printing this book was made available by the Government of India at concessional rate.

Sri Vidyabharathi Book Centre, Sringeri

CC-O. In Public Domain. Digitized by eGangotri

ವಯಸ್ಕರ ಶಿಕ್ಷಣ

ಇದು ಒಂದು ಹೊಸ ಮಾತು. ಹೊಸ ಭಾವನೆ. ಹೊಸ ಪ್ರಯತ್ನ.

ನಮ್ಮ ಜನ ಬಹುತೇಕ ಅನಕ್ಷರಸ್ಥರಾಗಿದ್ದರು. ಕುರಿತು ಓದದೆಯೂ ಬುದ್ಧಿವಂತರೇನೋ ನಿಜ. ಆದರೆ ಓದು ಬರಹ ಬರುತ್ತಿರಲಿಲ್ಲ. ಕನ್ನಡದ ಜನ, ನಾವು ಬಲ್ಲಂತೆ, ಕೇಳಿದಂತೆ, ನಮ್ಮ ಜನಪ್ರಿಯ ಕಾವ್ಯಗಳನ್ನು ಅರ್ಥಮಾಡಿಕೊಂಡು, ಅರಗಿಸಿಕೊಂಡು ವ್ಯಾಖ್ಯಾನವನ್ನು ಮಾಡುವ ಸಾಮರ್ಥ್ಯವನ್ನು ಪಡೆದಿದ್ದರು. ಕುಮಾರವ್ಯಾಸ, ಜೈಮಿನಿ, ಹರಿಶ್ಚಂದ್ರ ಕಾವ್ಯ, ಸರ್ವಜ್ಞನ ವಚನಗಳನ್ನು ನೆನಪಿಟ್ಟುಕೊಂಡು, ಅರ್ಥ ಹೇಳುತ್ತಿದ್ದರು. ಅಲ್ಲಿನ ಕೆಲವು ಜ್ಞಾನವನ್ನೂ ಪೌರಾಣಿಕ ಅಂಶಗಳನ್ನೂ ರಕ್ತಗತಮಾಡಿಕೊಂಡಿದ್ದರು. ಆದರೆ ಓದು ಬರಹ ಬರುತ್ತಿರಲಿಲ್ಲ. ಓದು ಬರಹ ಬಾರದ ರಾಜರೂ, ಅಧಿಕಾರಿಗಳೂ ಇದ್ದರೆಂಬುದನ್ನು ಕೇಳಿದ್ದೇವೆ.

ಈ ವಿದ್ಯೆ ಸಾಲದು. ಅವರು ಅಕ್ಷರವನ್ನು ಕಲಿತು ತಾವೇ ಸ್ವಂತವಾಗಿ ಓದುವುದನ್ನು ಕಲಿಯಬೇಕು. ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಇದು ಅಗತ್ಯ ಎಂದು ಬುದ್ಧಿವಂತ ಜನ ಕಂಡರು. ಜನವನ್ನು ವಿದ್ಯಾವಂತರನ್ನಾಗಿ ಮಾಡುವ ಈ ಯೋಜನೆ ಪ್ರಜಾಪ್ರಭುತ್ವ ಆಡಳಿತದ ಪ್ರಥಮ ಸೂತ್ರವಾಯಿತು.

ಶಾಲೆಗೆ ಹೋಗಲು ಆಗದ, ಹೋಗದೆ ಬೆಳೆದ ವಯಸ್ಕರಿಗೆ 'ಅಕ್ಷರ ಕಲಿಕೆ' ಶಾಲೆಗಳನ್ನು ತೆರೆದು ಆ ಮೂಲಕ ಅವರಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಲಿಯುವುದಕ್ಕೆ ಕೊನೆಯಿಲ್ಲ
ಈಗಲೂ ಕಾಲ ಮಿಂಚಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಬರಹ ಓದುಗಳನ್ನು ಕಲಿಸಿ, ಅವರಿಗೆ ಇಂದಿನ ಸರಕಾರ ಕೈಗೊಂಡ ಅಥವಾ ಕೈಕೊಳ್ಳುವ ಹೊಸ ಹೊಸ ಯೋಜನೆಗಳ ಬಗ್ಗೆ, ಲೌಕಿಕ, ಸಾಮಾಜಿಕ ಪ್ರಜ್ಞೆಗಳ ಬಗ್ಗೆ ತಿಳಿವಳಿಕೆ ಕೊಡುವ ಪ್ರಯತ್ನವನ್ನೂ ಸರಕಾರ ಈ 'ವಯಸ್ಕರ ಶಿಕ್ಷಣ ಯೋಜನೆ'ಯ ಆಡಿಯಲ್ಲಿ ಸೇರಿಸಿಕೊಂಡಿತು.

ಹೀಗೆ ವಯಸ್ಕರಿಗೆ ಅಕ್ಷರ ಕಲಿಸುವುದರಿಂದ ಆರಂಭವಾದ ರಾತ್ರಿ ಶಾಲೆಗಳು ಇಂದು ವಿದ್ಯಾಕೇಂದ್ರಗಳಾಗಿ ಬೆಳೆದಿವೆ. 'ವಯಸ್ಕರ ಶಿಕ್ಷಣ ಸಮಿತಿ'ಯ ಕಾರ್ಯವ್ಯಾಪ್ತಿ ವಿಸ್ತಾರಗೊಂಡಿದೆ.

ಸಾಕ್ಷರತೆ ಪ್ರತಿಯೊಬ್ಬ ವ್ಯಕ್ತಿಯ ಇಡೀ ಜೀವನದ ವಿಕಾಸಕ್ಕೆ ನೆರವಾಗಬೇಕು. ಅದು ಜನತೆಯ ಆರ್ಥಿಕ, ಸಾಮಾಜಿಕ ರಾಜಕೀಯ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಗೆ ಅನುವಾಗತಕ್ಕದ್ದು. ಆದ್ದರಿಂದ ಇಂದು ಸಾಕ್ಷರತೆಯನ್ನು ಜನಜೀವನದ ಅಭಿವೃದ್ಧಿಗೆ ಬಳಸುವ ಪ್ರಯತ್ನ ನಡೆಯುತ್ತಿದೆ. ಇದು ಒಂದು ರೀತಿಯ ಮಹಾತ್ಮಾ ಗಾಂಧಿಯವರ ಮೂಲಶಿಕ್ಷಣ.

ಭಾರತದಲ್ಲಿ ವಯಸ್ಕರ ಶಿಕ್ಷಣ

ಭಾರತದಲ್ಲಿ ಒಂದು ಕಾಲಕ್ಕೆ ಜ್ಞಾನ ಪ್ರಸಾರ ಬಾಯಿ ಮೂಲಕ ನಡೆಯುತ್ತಿತ್ತು. ಸನ್ಯಾಸಿಗಳು ಮತ್ತು ಸಾಧು ಸಂತರು ಕೀರ್ತನಕಾರರು ಊರಿಂದ ಊರಿಗೆ ಚಲಿಸುತ್ತ ಹಾಡುಗಳ ಮೂಲಕ ಜನತೆಯ ಜೀವನ ಬೆಳಗಿದ್ದಾರೆ. ಮಹಾಭಾರತ, ರಾಮಾಯಣ ಮುಂತಾದ ಪುರಾಣ ಪ್ರವಚನಗಳ ಮೂಲಕ ಜನತೆಯ ಶಿಕ್ಷಣ ಸಾಗಿದೆ. ಯಕ್ಷಗಾನ, ಬಯಲಾಟ, ಸೂತ್ರದ ಬೊಂಬೆ, ಚಕ್ಕಳಗೊಂಬೆ ಮುಂತಾದುವು ಬಹು ಕಾಲದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ಞಾನ ಪ್ರಸಾರ ಸಾಧನಗಳು. ಒಟ್ಟಿನಲ್ಲಿ ಭಾರತದಲ್ಲಿ ವಯಸ್ಕರ ಶಿಕ್ಷಣಕ್ಕೆ ಒಳ್ಳೆಯ ಪರಂಪರೆ ಇದೆ.

ಬ್ರಿಟನ್ನಿನ ಆಳರಸರ ಹಿಡಿತದಿಂದ ಭಾರತೀಯರು ಬಿಡು ಗಡೆ ಹೊಂದಲು ಚಳುವಳಿ ಹೂಡಿದರು. ಪರಿಣಾಮವಾಗಿ 1937ರಲ್ಲಿ ಬ್ರಿಟಿಷ್ ಪ್ರಾಂತ್ಯಗಳಿಗೆ ಪ್ರಾಂತೀಯ ಸರಕಾರ ಲಭಿಸಿತು. ಪೂರ್ಣ ಸ್ವಾತಂತ್ರ್ಯ ಪಡೆಯುವುದು ಭಾರತೀಯ ಮುಖಂಡರ ಗುರಿ ಆಗಿತ್ತು. ಈ ದಿಸೆಯಲ್ಲಿ ಜನ ಜಾಗೃತಿ ಉಂಟುಮಾಡಲು ಜನಪ್ರಿಯ ಮುಖಂಡರು ಹೆಚ್ಚಿನ ಪ್ರಯತ್ನ ಮಾಡಿದರು. ಪ್ರಾಂತೀಯ ಸರಕಾರದ ಸೂತ್ರ ಹಿಡಿದಿದ್ದ ಮುಖಂಡರು ವಿವಿಧ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಕೈಕೊಂಡರು. ಜೊತೆಗೆ ಬಿಹಾರಿನ ವಿದ್ಯಾಮಂತ್ರಿ ಡಾ. ಸೈಯದ್ ಮಹಮದ್ ಅವರು ಆದರ್ಶ ರೀತಿಯಲ್ಲಿ ಬಿಹಾರಿನಲ್ಲಿ ಅಕ್ಷರ ಪ್ರಚಾರ ಆಂದೋಳನವನ್ನು ಕೈಕೊಂಡರು. ಕಚೇರಿಯ ಕೆಲಸ ಮುಗಿದ ನಂತರ ಸಾರ್ವಜನಿಕ ಚೌಕದಲ್ಲಿ ಕಪ್ಪು ಹಲಗೆ ಮತ್ತು ಸೀಮೆಸುಣ್ಣ ಹಿಡಿದು ವಯಸ್ಕರಿಗೆ ಓದು ಬರಹ ಕಲಿಸಲು ಆರಂಭಿಸಿದರು. ಈ ತೆರನಾದ ಚಳುವಳಿ ಜನತೆಯ ಮೇಲೆ ಹೆಚ್ಚಿನ ಪರಿಣಾಮ ಉಂಟುಮಾಡಿತು. ಮುಂಬಯಿ ಪ್ರಾಂತ್ಯದಲ್ಲಿ ಮುಖ್ಯ ಮಂತ್ರಿ ಬಿ. ಜಿ. ಖೇರ್ ಅವರ ಅಧ್ಯಕ್ಷತೆಯಲ್ಲಿ ವಯಸ್ಕರ ಶಿಕ್ಷಣ ಸಮಿತಿ ವ್ಯವಸ್ಥೆ ಆಯಿತು. ಮದರಾಸಿನಲ್ಲಿ ಚಕ್ರವರ್ತಿ ರಾಜಗೋಪಾಲಾಚಾರ್ಯರು ಮುಖ್ಯ ಮಂತ್ರಿ ಆಗಿದ್ದರು. ಅವರು ತಮ್ಮ ಕೆಲಸದ ಮಧ್ಯೆ ಬಿಡುವು ಮಾಡಿಕೊಂಡು ತಮಿಳಿನಲ್ಲಿ ಒಂದು ಪಠ್ಯಪುಸ್ತಕವನ್ನು ರಚಿಸಿದ್ದು ಒಂದು ವೈಶಿಷ್ಟ್ಯ. ಔಂದ್ ಸಂಸ್ಥಾನದಲ್ಲಿ ಅಲ್ಲಿಯ ಮಹಾರಾಜರೇ ಸ್ವತಃ ನಿರಕ್ಷರತಾ ನಿವಾರಣಾ ಚಳುವಳಿಯಲ್ಲಿ ಧುಮುಕಿದರು. ಈ ಪವಿತ್ರ ಕಾರ್ಯದಲ್ಲಿ ಅವರ ಮಗನೂ ಸೊಸೆಯೂ ಅವರ ಪೆರವಾಗಿದ್ದರು. ಎರಡೂರು ತಿಂಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ವರೆಗೆ ಪ್ರಾಥಮಿಕ ಶಾಲೆಗಳನ್ನು ಮುಚ್ಚಿದರು. ಶಾಲಾ ಉಪಾಧ್ಯಾಯರನ್ನು ನಿರಕ್ಷರತಾ ನಿವಾರಣಾ ಚಳುವಳಿಗೆ ನಿಯೋಜಿಸಿದರು. ಮಹಾರಾಜರು ಮತ್ತು ಅವರ ಮಕ್ಕಳು ಪಾದಚಾರಿಗಳಾಗಿ ಹಳ್ಳಿಗಳಲ್ಲಿ ಸಂಚರಿಸಿ ಅಕ್ಷರ ಪ್ರಚಾರ ಸಂದೇಶವನ್ನು ಸಾರಿದ್ದು ಮೆಚ್ಚುವಂತಹ ವಿಚಾರ. ಕೇವಲ ಮೂರು ತಿಂಗಳಿನಲ್ಲಿ ಅದರ ಪ್ರಯತ್ನದ ಫಲವಾಗಿ 12 ಸಾವಿರ ಮಂದಿ ಅಕ್ಷರಸ್ಥರಾದರು. ಬಂಗಾಳದಲ್ಲಿ ಸ್ವಯಂಸೇವಕರು "ಮುಷ್ಟಿಭಿಕ್ಷ ಚಳುವಳಿ" ಕೈಕೊಂಡರು. ಅದರ ಪ್ರಕಾರ ಪ್ರತಿ ಸಂಸಾರವೂ ಪ್ರತಿನಿತ್ಯ ಒಂದು ಹಿಡಿ ಅಕ್ಕಿಯನ್ನು ಜ್ಞಾನಭಿಕ್ಷೆಯ ಸಲುವಾಗಿ ಮೀಸಲಾಗಿಡುತ್ತಿತ್ತು. ಈ ರೀತಿ ಸಂಗ್ರಹಿಸಿದ ಅಕ್ಕಿ ಅಕ್ಷರ ಪ್ರಚಾರಕ್ಕೆ ಉಪಯೋಗ ಆಯಿತು. ಉತ್ತರ ಪ್ರದೇಶದಲ್ಲಿ ಸಂಚಾರಿ ವಯಸ್ಕರ ಶಿಕ್ಷಣ ಶಾಲಾ ಯೋಜನೆ ಪ್ರಾರಂಭವಾಯಿತು. ಅದರ ಪ್ರಕಾರ ಉಪಾಧ್ಯಾಯರು ಒಂದು ಹಳ್ಳಿಯಲ್ಲಿ ಎಲ್ಲರಿಗೂ ಓದು ಬರಹ ಕಲಿಸಿದ ನಂತರ ಮುಂದಿನ ಊರಿಗೆ ಹೋಗಬೇಕಿತ್ತು. ಈ ವೇಳೆಗೆ ವಯಸ್ಕರ ಶಿಕ್ಷಣ ತಜ್ಞ ಡಾ. ಲಾಬಕ್ "ಇಂಡಿಯ ಶೆಲ್ ಬಿ ಲಿಟರೇಟ್" ಎಂಬ ಪುಸ್ತಕ ಪ್ರಕಟಿಸಿದರು. ಅವರು ಭಾರತದಲ್ಲಿ ತೀವ್ರತೆರನಾಗಿ ಪ್ರವಾಸ ಮಾಡಿ "ಈಚ್ ಒನ್ ಟೀಚ್ ಒನ್" (ಕಲಿಯದವನ ಹೊಣೆ ಕಲಿತವನದು) ಎಂಬ ಚಳುವಳಿಯನ್ನು ಪ್ರಚೋದಿಸಿದರು. ಹೀಗೆ ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ರೀತಿಯಲ್ಲಿ ವಯಸ್ಕರ ಅಕ್ಷರ ಪ್ರಚಾರ ಆರಂಭವಾಯಿತು.

ವಯಸ್ಕರ ಅಕ್ಷರ ಪ್ರಚಾರಕ್ಕೆ ಇಷ್ಟೊಂದು ಮಹತ್ವ ನೀಡಿರುವುದು ಆಶ್ಚರ್ಯವೇನಲ್ಲ? ಒಂದು ಕಾಲಕ್ಕೆ ಬಂಗಾಳದಲ್ಲಿ ಅಕ್ಷರ ಪ್ರಚಾರ ಕೇಂದ್ರಗಳ ಮೇಲೆ ಬ್ರಿಟನ್ನಿನ ಆಳರಸರು ಕಣ್ಣಿಟ್ಟರು. ಅದಕ್ಕಾಗಿ ಗೂಢಚಾರರನ್ನು ನೇಮಿಸಿದರು. ಇಂಡೊ

Sri Vidyabharathi Book Centre, Sringeri

CC-O. In Public Domain. Digitized by eGangotri

ನೇಷಿಯ ನಮ್ಮಂತೆ ಡಚ್ಚರ ಆಡಳಿತದಲ್ಲಿತ್ತು. ಅಲ್ಲಿನ ಮುಖಂಡರು ಜನತೆಯನ್ನು ಜಾಗೃತಿಗೊಳಿಸಲು ರಾತ್ರಿ ವಯಸ್ಕರ ತರಗತಿಗಳನ್ನು ತೆರೆದರು. ಆದರೆ ಡಚ್ ಆಳರಸರು ಅದಕ್ಕೆ ಅಡ್ಡಿ ಒಡ್ಡಿದರು. ಕಾರಣ, ವಿದ್ಯಾವಂತ ಜನತೆ ತಮ್ಮ ಆಡಳಿತಕ್ಕೆ ಮಾರಕ ಆದಾರು ಎಂಬ ಭೀತಿ ಆವರಿಸಿತ್ತು. "ಲೇಖನಿ ಕತ್ತಿಗಿಂತ ಹಿರಿದು" ಎಂಬ ನಾಣ್ನುಡಿ ಸತ್ಯವಾಯಿತು. ಬ್ರಿಟಿಷ್ ಪ್ರಾಂತ್ಯಗಳಲ್ಲಿ ನಡೆದ ಕಾರ್ಯ ಮೈಸೂರಿನ ಮೇಲೆ ಪ್ರಭಾವ ಬೀರದೆ ಇರಲಿಲ್ಲ.

ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ

ಮಾದರಿ ಮೈಸೂರು ಕರ್ನಾಟಕದ ಒಂದು ಭಾಗ. ಮೈಸೂರನ್ನು ಚಿನ್ನದ ನಾಡು, ಗಂಧದ ಗುಡಿ ಎಂದು ಕರೆಯುವುದು ರೂಢಿ. ಅಂತೆಯೇ 'ವಯಸ್ಕರ ಶಿಕ್ಷಣ ಎಂದರೆ ಮೈಸೂರು, ಮೈಸೂರು ಎಂದರೆ ವಯಸ್ಕರ ಶಿಕ್ಷಣ' ಎಂಬ ಹೆಸರು ಪಡೆದ ಕಾಲ ಒಂದಿತ್ತು. ಮೈಸೂರಿನ ವಿದ್ಯಾಪೀಠಗಳು ವಯಸ್ಕರ ಶಿಕ್ಷಣ ತಜ್ಞರ ಮತ್ತು ಕಾರ್ಯಕರ್ತರ ಯಾತ್ರಾ ಸ್ಥಳಗಳೂ ಆಗಿದ್ದವು. ಇಂದು ಸಮಿತಿಯ ಕಾರ್ಯಕ್ರಮಗಳು ಆ ಒಳ್ಳೆಯ ಹೆಸರಿನ ನೆಳಲಿನಲ್ಲೇ ನಡೆಯುತ್ತಿವೆ.

ಮೈಸೂರಿನಲ್ಲಿ ಬಹುಮಂದಿ ವಯಸ್ಕರ ಶಿಕ್ಷಣದ ಬೆಳವಣಿಗೆಗೆ ಸೇವೆ ಸಲ್ಲಿಸಿದ್ದಾರೆ. ಅವರ ಪೈಕಿ ಕೆಲವರ ಸೇವೆಯನ್ನು ಯುನೆಸ್ಕೋ ಪಡೆದಿದೆ. ದಿವಂಗತ ಎಸ್. ವಿ. ಶ್ರೀನಿವಾಸರಾಯರು, ಸರ್ವಶ್ರೀ ಟಿ. ಕೃಷ್ಣಮೂರ್ತಿ, ಈಗಲ್ಟನ್ ಮತ್ತು ನ. ಭದ್ರಯ್ಯನವರು ಹೊರ ದೇಶಗಳಲ್ಲಿ ವಯಸ್ಕರ ಶಿಕ್ಷಣ ತಜ್ಞರಾಗಿ ಸೇವೆ ಸಲ್ಲಿಸಿ ಮೈಸೂರಿನ ಕೀರ್ತಿಯನ್ನು ಬೆಳಗಿದ್ದಾರೆ. ಇಂತಹ ಮಾದರಿಯಾದ ಮಹತ್ಕೆಲಸ ಸಲ್ಲಿಸಿರುವ ಹಾಗೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂತರ ರಾಷ್ಟ್ರೀಯ ಕೀರ್ತಿಯನ್ನು ಗಳಿಸಿರುವ ಸಂಸ್ಥೆಯನ್ನು ಹುಟ್ಟು ಹಾಕಿದವರು ಮೈಸೂರು ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು. ಅಂತಹ ಸಂಸ್ಥೆಯ ಹುಟ್ಟು ಮತ್ತು ಬೆಳವಣಿಗೆಯನ್ನು ತಿಳಿಸುವ ಮುನ್ನ ಕರ್ನಾಟಕದ ಭೌಗೋಳಿಕ ಹಿನ್ನೆಲೆಯನ್ನು ತಿಳಿಸುವುದು ಒಳಿತು. 1956ರಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳು ಸೇರಿ ಕರ್ನಾಟಕ ಎಂದು ಸೃಷ್ಟಿ ಆಗಿದ್ದು ಎಲ್ಲರ ಜ್ಞಾಪಕದಲ್ಲಿದೆ. ಕರ್ನಾಟಕದಲ್ಲಿ ಮದರಾಸು, ಮುಂಬಯಿ ಮತ್ತು ಹೈದರಾಬಾದಿನ ಕನ್ನಡ ಪ್ರದೇಶಗಳು ಸೇರಿವೆ. ಹೈದರಾಬಾದು ಕರ್ನಾಟಕದಲ್ಲಿ ಯಾವ ತೆರನಾದ ವಯಸ್ಕರ ಶಿಕ್ಷಣ ಕಾರ್ಯ ನಡೆಯುತ್ತಿರಲಿಲ್ಲ. ಮುಂಬಯಿ ಕರ್ನಾಟಕದಲ್ಲಿ "ಕರ್ನಾಟಕ ಪ್ರಾದೇಶಿಕ ಸಮಾಜ ಶಿಕ್ಷಣ ಸಮಿತಿ" ಎಂಬ ಸಂಸ್ಥೆ ಬೆಳಗಾಂನಲ್ಲಿತ್ತು. ಅದು ಕೆಲವು ಕಾಲ ಕೆಲಸ ಮಾಡಿ ಈಗ ರದ್ದಾಗಿದೆ. ಮದರಾಸಿಗೆ ಸೇರಿದ್ದ ಬಳ್ಳಾರಿಯಲ್ಲಿ ಪುಸ್ತಕ ಭಂಡಾರದ ಕಾನೂನಿನ ಪ್ರಕಾರ ಗ್ರಾಮೀಣ ಪುಸ್ತಕ ಭಂಡಾರ ಗಳಿದ್ದವು. ಸಾಕ್ಷರತೆಯಲ್ಲಿ ಮುಂದುವರಿದ ಕೊಡಗಿನಲ್ಲಿ ಅಕ್ಷರ ಪ್ರಚಾರ ಮತ್ತು ಪುಸ್ತಕ ಭಂಡಾರದ ಕೆಲಸ ನಡೆಯುತ್ತಿತ್ತು.

ವಿದ್ಯಾರ್ಥಿಗಳು ಯಾವಾಗಲೂ ಉತ್ಸಾಹಿಗಳು. ಮನಸ್ಸು ಮಾಡಿದರೆ ಒಳ್ಳೆಯ ಕೆಲಸ ಮಾಡಬಲ್ಲರು. ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಟ್ಟಲ್ಲಿ ತಪ್ಪಾಗಲಾರದು. ಪಶ್ಚಿಮ ಬಂಗಾಳದ ಕೆಲವು ವಿದ್ಯಾರ್ಥಿಗಳು ಅಕ್ಷರ ಪ್ರಚಾರ ಕೈಗೊಳ್ಳಲು ಇಚ್ಛೆಪಟ್ಟರು. ಆದರೆ ಅವರದು ಬರಿಗೈ. ಹಣ ಇಲ್ಲದೆ ಕೆಲಸ ಮಾಡಲು ಸಾಧ್ಯವೆ ? ಮನಸ್ಸಿದ್ದಲ್ಲಿ ಮಾರ್ಗವಿದೆ. ಮೈನಲ್ಲಿದ್ದ ರಕ್ತ ದಾನ ಮಾಡಿದರು. ಆದರಿಂದ 180 ರೂ. ಬಂತು. ಕೆಲಸ ಪ್ರಾರಂಭಿಸಲು ಅದೇ ಮೂಲ ಬಂಡವಾಳ ಆಯಿತು. ಆದೇ ಕಡೆಗೆ ಅಕ್ಷಯ ಆಯಿತು. ಆದರ ಸೇವೆಯ ಕೀರ್ತಿ ಹಬ್ಬಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದೇ ಮುಂದೆ "ಪಶ್ಚಿಮ ಬಂಗಾಳ ನಿರಕ್ಷರತಾ ದೂರೀಕರಣ ಸಮಿತಿ" ಎಂಬ ಹೆಸರಾಂತ ಸಂಸ್ಥೆ ಆಗಿದೆ.

ಡೆನ್ಮಾರ್ಕಿನ ಹಲವಾರು ವಿದ್ಯಾರ್ಥಿಗಳು ಜಾಂಬಿಯದಲ್ಲಿ ನಡೆಯುತ್ತಿದ್ದ ವಯಸ್ಕರ ಶಿಕ್ಷಣ ಕಾರ್ಯಕ್ಕೆ ಸಹಾಯ ಮಾಡಲು ಇಷ್ಟ ಪಟ್ಟರು. ಆದರೆ ಅವರ ಕೈನಲ್ಲಿ ಹಣ ಇರಲಿಲ್ಲ. ಅವರೆಲ್ಲರೂ ಸೇರಿ ಕಾರ್ಖಾನೆ ಮುಂತಾದ ಉದ್ಯಮಿಗಳೊಡನೆ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು. ಒಂದು ದಿನ ಅವರ ಕಾರ್ಖಾನೆಗಳಲ್ಲಿ ಸೇವೆ ಸಲ್ಲಿಸುವುದಾಗಿ ಒಪ್ಪಿದರು. ಅದರ ಪ್ರತಿಫಲವಾಗಿ ಆ ದಿನದ ಕೂಲಿ ಕೊಡುವುದಾಗಿ ಉದ್ಯಮಿಗಳಿಂದ ಭರವಸೆ ಬಂತು. ಅಂತೆಯೇ ವಿದ್ಯಾರ್ಥಿಗಳು ಒಂದು ದಿನ ಯಥಾನುಶಕ್ತಿ ತಮ್ಮ ಸೇವೆ ಸಲ್ಲಿಸಿದರು. ಆದರ ಫಲವಾಗಿ ಲಕ್ಷ ರೂಪಾಯಿ ವಸೂಲಾಯಿತು. ಅದನ್ನು ಜಾಂಬಿಯದ ವಯಸ್ಕರ ಶಿಕ್ಷಣಕ್ಕೆ ಕಾಣಿಕೆಯಾಗಿ ಸಲ್ಲಿಸಿದರು. ಇಂತಹ ಹಲವಾರು ನಿದರ್ಶನಗಳಿವೆ. ಒಟ್ಟಿನಲ್ಲಿ ವಿದ್ಯಾರ್ಥಿಗಳು ಮನಸ್ಸು ಮಾಡಿದಲ್ಲಿ ಎಂತಹ ಒಳ್ಳೆಯ ಕೆಲಸವನ್ನಾದರೂ ಮಾಡಬಲ್ಲರು ಎಂಬುದಕ್ಕೆ ಇದೇ ಸಾಕ್ಷಿ.

ಮೈಸೂರು ಸಂಸ್ಥಾನದ ವಿದ್ಯಾರ್ಥಿಗಳು ಈ ಕಾರ್ಯದಲ್ಲಿ ಹಿಂದೆ ಬಿದ್ದಿಲ್ಲ ಎಂಬ ಅಂಶವನ್ನು ಮೇಲೆ ತಿಳಿಸಿದೆ. ಸಣ್ಣದಾಗಿ ಆರಂಭವಾದ ಸಂಸ್ಥೆ ಇಂದು ಅಂತರ ರಾಷ್ಟ್ರೀಯ ಕೀರ್ತಿ ಪಡೆದಿದೆ. ಜೊತೆಗೆ ಯುನೆಸ್ಕೊ ಅಂಗ ಸಂಸ್ಥೆಯಾಗಿ ಕೀರ್ತಿ ಪಡೆದ ಕಾಲ ಒಂದಿತ್ತು.

ಮೈಸೂರಿನಲ್ಲಿ ನಡೆದ ವಯಸ್ಕರ ಶಿಕ್ಷಣದ ಅನುಭವವನ್ನು ಯುನೆಸ್ಕೊ ಪಡೆಯಲು ಇಚ್ಛಿಸಿತು. ಅದರಿಂದ ಮೈಸೂರಿನ ಹತ್ತಿರವಿರುವ ಬೃಂದಾವನದಲ್ಲಿ ಆಗ್ನೇಯ ಏಷ್ಯಾ ರಾಷ್ಟ್ರಗಳ ವಿಚಾರ ಸಂಕಿರಣ (1949) ನಡೆಯಿತು. ಅಮೆರಿಕದ ಫೋರ್ಡ್

Sri Vidyabharathi Book Centre, Shringeri

CC-O. In Public Domain. Digitized by eGangotri



ರಕ್ತದಾನ, ಶ್ರಮದಾನಗಳಿಗಿಂತಲೂ ಮಿಗಿಲಾದದ್ದು ವಯಸ್ಕರ ಶಿಕ್ಷಣ
ಬನ್ನಿ, ಈ ಮಹಾಯಜ್ಞದಲ್ಲಿ ನೀವೂ ಪಾಲ್ಗೊಳ್ಳಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಫೌಂಡೇಶನ್ ಸಂಸ್ಥೆ ವಿದ್ಯಾಪೀಠಗಳ ಕಾರ್ಯ ಕಂಡು ಮೆಚ್ಚಿದೆ. ರಾಜ್ಯಾದ್ಯಂತ ಎಂಟು ವಿದ್ಯಾಪೀಠಗಳನ್ನು ತೆರೆಯಲು ಫೋರ್ಡ್ ಫೌಂಡೇಶನ್ 11 ಲಕ್ಷ ರೂಪಾಯಿ ಧನ ಸಹಾಯ ನೀಡಿತು.

ಡೆನ್ಮಾರ್ಕ್ ಜನತಾ ಶಾಲೆಗಳ ತವರು. ಅವು 150 ವರ್ಷಗಳ ಇತಿಹಾಸ ಹೊಂದಿವೆ. ಡೆನ್ಮಾರ್ಕಿನ ಇಡೀ ಜನಜೀವನ ಬದಲಾಗಲು ಈ ಶಾಲೆಗಳೇ ಕಾರಣ. ಇವೆಲ್ಲಾ ಖಾಸಗಿ ಪ್ರಯತ್ನದ ಜೊತೆಗೆ ಸರಕಾರದ ನೆರವಿನಿಂದ ಸಾಧ್ಯವಾಗಿದೆ. ಅಲ್ಲಿನ ಸರಕಾರ ಜನತಾ ಶಾಲೆಗಳ ಆಡಳಿತದಲ್ಲಿ ತಲೆ ಹಾಕದಿರುವುದು ಒಂದು ವೈಶಿಷ್ಟ್ಯ. ಡೆನ್ಮಾರ್ಕಿನಲ್ಲಿ "ಮೆಲಮ್ ಫೋಕ್ ಲೈಟ್ ಸಂವರ್ಕೆ" ಎಂಬ ಖಾಸಗಿ ಸಂಸ್ಥೆ ಇದೆ. ಅದು ಸಮಿತಿಯ ವಿದ್ಯಾಪೀಠಗಳಿಗೆ ಹೆಚ್ಚಿನ ತಾಂತ್ರಿಕ ಸೇವೆ ಸಲ್ಲಿಸಿದೆ. ಜೊತೆಗೆ ಅಲ್ಲಿನ ಕೆಲವು ತಜ್ಞ ಸ್ವಯಂಸೇವಕರು ವಿದ್ಯಾಪೀಠಗಳಲ್ಲಿ ನೆಲಸಿ ಹೆಚ್ಚಿನ ಸೇವೆ ಸಲ್ಲಿಸಿರುವರು. ಪಶುಪಾಲನೆ, ಕೋಳಿ ಸಾಕಣೆ, ಮರಗೆಲಸ ಮುಂತಾದವು ಅವರ ಕೊಡುಗೆಗಳು. ಶಿವಾರಗುಡ್ಡ ವಿದ್ಯಾಪೀಠದಲ್ಲಿ ಅವರಿಂದ ಸ್ಥಾಪನೆಯಾದ ಸಹಕಾರ ಸಂಸ್ಥೆ ಒಂದು ಇತ್ತು. ಅದು ಇಂದು ಮುಚ್ಚಿ ಹೋಗಿದೆ.

ವಯಸ್ಕರ ಶಿಕ್ಷಣ ಸಮಿತಿ ಯುನೆಸ್ಕೊ ಅಂಗ ಸಂಸ್ಥೆ ಎಂಬುದನ್ನು ಹಿಂದೆಯೇ ಹೇಳಿದೆ. ಯುನೆಸ್ಕೊ ಸಮಿತಿಯ ಪರವಾಗಿ ಹೊರ ದೇಶಗಳಲ್ಲಿ ಪ್ರಚಾರ ಮಾಡಿ ಸಂಗ್ರಹವಾದ ಹಣವನ್ನು "ಉಡುಗೊರೆ ಚೀಟಿ"ಗಳ ಮೂಲಕ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಗೆ ಕಳುಹಿಸಿದೆ. ಈ ಹಣದಿಂದ ಮತ್ತು ಭಾರತ ಸರಕಾರದ ನೆರವಿನಿಂದ ಸಮಿತಿ ತನ್ನದೇ ಆದ ಮುದ್ರಣಾಲಯವನ್ನು ತೆರೆದಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸೇವೆಗೆ ಸೂಕ್ತ ಪುರಸ್ಕಾರ

ಭಾರತದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ವಯಸ್ಕರ ಶಿಕ್ಷಣ ಸಂಸ್ಥೆಗಳಿಗೆ ಅಖಿಲ ಭಾರತ ವಯಸ್ಕರ ಶಿಕ್ಷಣ ಮಂಡಳಿ "ನೆಹರು ಸಾಕ್ಷರತಾ ಪ್ರಶಸ್ತಿ"ಯನ್ನು ನೀಡುತ್ತಲಿದೆ. ಈ ಪಾರಿತೋಷಕ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಗೆ 1970ನೆಯ ಸಾಲಿಗೆ ದೊರೆತಿದೆ. ಅಂತೆಯೇ ಅಂತರ ರಾಷ್ಟ್ರೀಯ ಮಟ್ಟದಲ್ಲಿ "ಮಹಮದ್ ರೆಜಫಹಲ್ವಿ ಪಾರಿತೋಷಕ"ವನ್ನು 1973ನೆಯ ಸಾಲಿಗೆ ಯುನೆಸ್ಕೊ ನೀಡಿದೆ. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಸೇವೆಯನ್ನು (Honourable mention) ಸ್ಮರಿಸಲಾಗಿದೆ.

ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ ಇತಿಹಾಸ

ಮೈಸೂರು ಸಂಸ್ಥಾನದ ದಿವಾನ್ ಶೇಷಾದ್ರಿ ಆಯ್ಯರ್ ಕೃಷಿಕರಿಗೆ ರಾತ್ರಿ ಶಾಲೆಗಳನ್ನು ತೆರೆಯುವ ಏರ್ಪಾಡು ಮಾಡಿದರು. ಇದು ಮೈಸೂರಿನಲ್ಲಿ ನಡೆದ ಮೊದಲ ಪ್ರಯತ್ನ. ಅಕ್ಷರ ಪ್ರಚಾರ ಚಳುವಳಿಯ ಸ್ವರೂಪ ಕಂಡದ್ದು ಸರ್. ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ. ಸಂಸ್ಥಾನದ ಪ್ರಗತಿಗೆ ವಿದ್ಯೆಯೇ ಮದ್ದು ಎಂಬುದನ್ನು ಅವರು ಚೆನ್ನಾಗಿ ಅರಿತಿದ್ದರು. ಇಂದಿನ ಮಕ್ಕಳು ಮುಂದಿನ ಪ್ರಜೆಗಳು. ಆದರೆ ಇಂದಿನ ಪ್ರಗತಿಗೆ ವಯಸ್ಕರು ಕಾರಣರು. ಆದ್ದರಿಂದ ಅವರು ಸರಕಾರದ ಆಡಳಿತದಲ್ಲಿ ಪಾಲುಗೊಳ್ಳುವುದು ಅಗತ್ಯ. ಆಗ ಮಾತ್ರ ಸರಕಾರ ಚೆನ್ನಾಗಿ ನಡೆದೀತು. ಈ ದೃಷ್ಟಿಯಿಂದ 1912ರಲ್ಲಿ ದೊಡ್ಡ ಪ್ರಮಾಣದಲ್ಲಿ ಅಕ್ಷರ ಪ್ರಚಾರ ಕೈಗೊಂಡರು. 7,000 ತರಗತಿಗಳು ಆರಂಭವಾದವು. ಗ್ರಂಥಾಲಯಗಳು ಅಸ್ತಿತ್ವಕ್ಕೆ ಬಂದವು. ಸಂಚಾರಿ ಗ್ರಂಥಾಲಯಗಳ ಏರ್ಪಾಡಾಯಿತು. ಜನತೆಯಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ವೈಜ್ಞಾನಿಕ ಮನೋಭಾವನೆ ಮೂಡಿಸಲು "ವಿಜ್ಞಾನ" ಎಂಬ ಪತ್ರಿಕೆ ಪ್ರಕಟವಾಯಿತು. ಆವರ ಯೋಜನೆ ಫಲಕಾರಿ ಆಗ ಲಿಲ್ಲ. ಕಾರಣ, ಜನತೆಯಲ್ಲಿ ಸಾಕಷ್ಟು ತಿಳುವಳಿಕೆ ಇರಲಿಲ್ಲ. ಮೇಲಾಗಿ ಈ ಬಗ್ಗೆ ಸಾಕಷ್ಟು ಪ್ರಚಾರ ಆಗಲಿಲ್ಲ. ತರಬೇತಾದ ಸಿಬ್ಬಂದಿಯ ಕೊರತೆ ಬೇರೆ. ಆದರೆ ಯೋಜನೆಯ ಲಾಭ ಪಡೆ ದವರು ಪಟ್ಟಣಿಗರು. ಆಂದು ಮೈಸೂರು ಮತ್ತು ಬೆಂಗಳೂರಿ ನಲ್ಲಿ ಪ್ರಾರಂಭವಾದ ಗ್ರಂಥಾಲಯಗಳು ಇಂದು ಚೆನ್ನಾಗಿ ಬೆಳೆದು ಜನತೆಗೆ ಹೆಚ್ಚಿನ ಸೇವೆ ಸಲ್ಲಿಸುತ್ತಿವೆ.

ವಯಸ್ಕರ ಅಕ್ಷರ ಪ್ರಚಾರದಲ್ಲಿ ಕೆಲವು ತಾಂತ್ರಿಕ ದೋಷ ಗಳಿದ್ದವು. ವಯಸ್ಕರು ಮಕ್ಕಳಂತಲ್ಲ. ಅವರು ಅನುಭವ ಶಾಲಿಗಳು, ವಿವೇಕಿಗಳು, ವಿಚಾರವಂತರು. ಆದ್ದರಿಂದ ಅವರಿಗೆ ಪ್ರತ್ಯೇಕ ಪಠ್ಯಪುಸ್ತಕಗಳು ಬೇಕು. ಆದರೆ ವಯಸ್ಕರ ರಾತ್ರಿ ಶಾಲೆಗಳಲ್ಲಿ ಮಕ್ಕಳ ಶಾಲೆಯ ಪಠ್ಯಪುಸ್ತಕಗಳೇ ಬಳಕೆಯಲ್ಲಿ ದ್ದವು. ವಯಸ್ಕರೊಂದಿಗೆ ಮಕ್ಕಳು ಸಹ ರಾತ್ರಿ ಶಾಲೆಗಳಿಗೆ ಬರಲು ಆಡ್ಡಿ ಇರಲಿಲ್ಲ. ಮಕ್ಕಳೊಂದಿಗೆ ವಯಸ್ಕರು ಕುಳಿತು ಓದು ಬರಹ ಕಲಿಯಲು ಒಪ್ಪುವರೆ? ಹೀಗಾಗಿ ಆವರ ಅಕ್ಷರ ಪ್ರಚಾರ ಯೋಜನೆ ಬಹುಕಾಲ ಮುಂದುವರಿಯಲಿಲ್ಲ. ಆದರೂ ವಯಸ್ಕರ ವಿದ್ಯಾಭ್ಯಾಸದ ಆಗತ್ಯತೆಯನ್ನು ಎತ್ತಿ ತೋರಿಸಿದ ಕೀರ್ತಿ ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಸಲ್ಲುವುದು. ಸರಕಾರ ವಯಸ್ಕರ ರಾತ್ರಿ ಶಾಲೆಗಳನ್ನು ಪ್ರತಿವರ್ಷ ಕಡಿಮೆ ಮಾಡುತ್ತ ಬಂತು. ಕಾರಣ ಆವು ಎಡವುತ್ತ, ಕುಂಟುತ್ತಾ ನಡೆದವು. ಆಖೈರಾಗಿ 1948ರಲ್ಲಿ ವಿದ್ಯಾಇಲಾಖೆ 75 ಶಾಲೆಗಳನ್ನು ವಯಸ್ಕರ ಶಿಕ್ಷಣ ಸಮಿತಿಗೆ ವಹಿಸಿಕೊಟ್ಟಿತು. ಆನಂತರ ಈ ಯೋಜನೆಯನ್ನು ಸರಕಾರ ರದ್ದು ಮಾಡಿತು.

ವಿಶ್ವದಲ್ಲಿ ಇಪ್ಪತ್ತೈದು ವರ್ಷಗಳ ಆಂತರದಲ್ಲಿ ಎರಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಯುದ್ಧಗಳು ನಡೆದವು; ಮೊದಲನೆಯದು 1914, ಎರಡನೆಯ ಯುದ್ಧ 1939. ಈ ಎರಡು ಯುದ್ಧಗಳ ಮಧ್ಯೆ ಭಾರತದಲ್ಲಿ ಸಾಕಷ್ಟು ಜನಜಾಗೃತಿ ಆಯಿತು. ಕನ್ನಡನಾಡು ಆದಕ್ಕೆ ಅಪವಾದ ಆಗಲಿಲ್ಲ. ಕನ್ನಡ ಪ್ರದೇಶಗಳೆಲ್ಲ ಒಂದಾಗಬೇಕು ಎಂಬ ಭಾವನೆ ಕನ್ನಡಿಗರಲ್ಲಿ ಉಂಟಾಯಿತು. ನಮ್ಮ ನಾಡು, ನುಡಿ ಎಂಬ ಪ್ರಜ್ಞೆ ಕನ್ನಡಿಗರಲ್ಲಿ ಅಂಕುರಿಸಿತು. ಕನ್ನಡ ನುಡಿಯ ಬೆಳವಣಿಗೆಗೆ ಕನ್ನಡ ಸಾಹಿತ್ಯ ಪರಿಷತ್ತು ಸೃಷ್ಟಿ ಆಯಿತು. ಅದರ ಕುಲಪತಿ ನಾಲ್ವಡಿ ಕೃಷ್ಣರಾಜ ಒಡೆಯರ್. ಆವರು ನಿರ್ಭಾಗ್ಯ ಗ್ರಾಮೀಣರ ಸಲುವಾಗಿ ಪ್ರಚಾರೋಪನ್ಯಾಸ ಮಾಲೆ ಯೋಜನೆಯನ್ನು ಜಾರಿಗೆ ತಂದರು. ಆ ಉಪನ್ಯಾಸಗಳು ಗ್ರಾಮೀಣರ ಆಸಕ್ತಿಗೆ ಸಂಬಂಧಪಟ್ಟವು. ಆ ನಂತರ ಆ ಉಪನ್ಯಾಸಗಳು ಸಣ್ಣ ಸಣ್ಣ ಹೊತ್ತಿಗೆಯ ರೂಪದಲ್ಲಿ ಪ್ರಕಟವಾದವು. ಅಂತೆಯೇ ಇಂದು ಕರ್ನಾಟಕ ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳು ಈ ಯೋಜನೆಯನ್ನು ಕೈಗೆತ್ತಿಕೊಂಡಿವೆ. ಕನ್ನಡ ನುಡಿಯ ಏಳಿಗೆಗೆ ಅಲ್ಲಲ್ಲೇ ಕರ್ನಾಟಕ ಸಂಘಗಳು ಏರ್ಪಟ್ಟವು. ಖಾಸಗಿ ಮುಖಂಡರು ಮತ್ತು ಸಾಹಿತಿಗಳು ಈ ಬಗ್ಗೆ ಹೆಚ್ಚು ಆಸಕ್ತಿವಹಿಸಿದರು. ಸಂಘದ ಆಶ್ರಯದಲ್ಲಿ ಪುಸ್ತಕ ಭಂಡಾರ ಮತ್ತು ವಾಚನಾಲಯಗಳು ಏರ್ಪಟ್ಟವು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಸಂಖ್ಯೆ ಹೆಚ್ಚಿದವು. ಒಟ್ಟಿನಲ್ಲಿ ಒಂದು ರೀತಿಯಲ್ಲಿ ಶೈಕ್ಷಣಿಕ ವಾತಾವರಣ ಬೆಳೆಯಿತು.

ಭಾರತಾದ್ಯಂತ ಬ್ರಿಟಿಷ್ ಪ್ರಾಂತ್ಯಗಳಲ್ಲಿ ನಡೆಯುತ್ತಿದ್ದ ವಯಸ್ಕರ ಶಿಕ್ಷಣ ಮೈಸೂರಿನ ಮೇಲೆ ಪ್ರಭಾವ ಬೀರಿತು ಎಂದು ಮೇಲೆ ಹೇಳಿದೆ. 1939ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸಮಾಜ ಸೇವೆಯಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ತರಬೇತು ನೀಡಲು ಯೂನಿವರ್ಸಿಟಿ ಸೆಟಲ್‌ಮೆಂಟ್ ಎಂಬ ಯೋಜನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯನ್ನು ಕೈಕೊಂಡಿತು. ಅದರ ಪ್ರಕಾರ ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಉಚಿತವಾದ ಊಟ ಮತ್ತು ವಸತಿ ಸೌಕರ್ಯವಿತ್ತು. ಅವರು ತಮ್ಮ ಬಿಡುವಿನ ವೇಳೆಯಲ್ಲಿ ನಗರದ ಕೊಳಚೆ ಪ್ರದೇಶಗಳ ಸಮೀಕ್ಷೆ ನಡೆಸಿದರು. ಬೆಂಗಳೂರು ಕೇಂದ್ರದ ಅಧಿಕಾರಿ ಪೀಟರ್‌ರೈಟ್ ಅವರು ಆಕ್ಸ್‌ಫರ್ಡ್ ವಿಶ್ವ ವಿದ್ಯಾನಿಲಯದ ಪದವೀಧರರು ಮತ್ತು ಈ ಕಾರ್ಯದ ಅನುಭವ ಉಳ್ಳವರು. ಮೈಸೂರು ಕೇಂದ್ರದ ಒಪ್ಪೊತ್ತಿನ (ಪಾರ್ಟ್ ಟೈಮ್) ಅಧಿಕಾರಿ ಟಿ. ಕೃಷ್ಣಮೂರ್ತಿಗಳು. ಅವರು ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು.

ಅಕ್ಷರ ಪ್ರಚಾರ ಕಾರ್ಯ ಪ್ರಾರಂಭ

ಮೈಸೂರಿನಲ್ಲಿ ಮಹಾರಾಜ ಕಾಲೇಜಿನ ವಿದ್ಯಾರ್ಥಿ ಸಂಘ ಉಂಟು. ಆ ಸಂಘ ವಿವಿಧ ಕಾರ್ಯ ಚಟುವಟಿಕೆಗಳನ್ನು ನಡೆಸಲು ಅನೇಕ ಉಪಸಮಿತಿಗಳನ್ನು ರಚಿಸಿತ್ತು. ಅವುಗಳ ಪೈಕಿ ಸಮಾಜ ಸೇವಾ ಸಮಿತಿಯೂ ಸಹ ಒಂದು. ಅದರ ಆಶ್ರಯದಲ್ಲಿ ಉತ್ಸಾಹವುಳ್ಳ ಕಾಲೇಜಿನ ವಿದ್ಯಾರ್ಥಿಗಳು ಶನಿವಾರ ಮತ್ತು ಭಾನುವಾರ ಮೈಸೂರಿನ ಸುತ್ತಮುತ್ತಲ ಹಳ್ಳಿಗಳಲ್ಲಿ ಸಮಾಜ ಸೇವೆ ಸಲ್ಲಿಸುತ್ತಿದ್ದರು. ಕೆಲವು ಬಸ್ ಮಾಲೀಕರು ವಿದ್ಯಾರ್ಥಿಗಳು ಹಳ್ಳಿಗಳಿಗೆ ಹೋಗಲು ಅನುಕೂಲವಾಗುವಂತೆ ಬಸ್ಸಿನ ಸೌಕರ್ಯಗಳನ್ನು ಏರ್ಪಡಿಸುತ್ತಿದ್ದರು. ಸಂಜೆಯ ವೇಳೆ ವಿದ್ಯಾರ್ಥಿಗಳು ಉಪನ್ಯಾಸ ಮತ್ತು ನಾಟಕಗಳನ್ನು ಏರ್ಪಡಿಸುತ್ತಿದ್ದರು. ಪೌರಾಣಿಕ ಹಿನ್ನೆಲೆಯ ನಾಟಕಗಳು ಗ್ರಾಮಸ್ಥರಿಗೆ ಆಕರ್ಷಕವಾಗಿದ್ದವು. ಕಾಲೇಜಿನ ಅಧ್ಯಾಪಕವರ್ಗದವರು ಈ ತೆರನಾದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು.

1940ರ ಜುಲೈ ತಿಂಗಳಲ್ಲಿ ಸಮಾಜ ಸೇವಾ ಸಮಿತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ವಯಸ್ಕರ ಸಾಕ್ಷರತಾ ಯೋಜನೆಯನ್ನು ರಚಿಸಿತು. ಈ ವಿಭಾಗಕ್ಕೆ ಎಸ್. ವಿ. ಶ್ರೀನಿವಾಸರಾಯರು ಕಾರ್ಯದರ್ಶಿ ಆದರು. ಅವರು ಆಗ ಪ್ರೌಢಶಾಲೆಯ ಅಧ್ಯಾಪಕರಾಗಿದ್ದರು. ಜೊತೆಗೆ ಅವರು ಸಮಾಜ ಸೇವೆ ಸಲ್ಲಿಸುತ್ತಿದ್ದರು. ಅವರಿಗೆ ಸಹಾಯಕರಾಗಿ ನಿಂತವರು ಮಂಡ್ಯದ ಸಿಂಗಾರಿ ಗೌಡರು. ಅವರು ಆಗಿನ್ನೂ ವಿದ್ಯಾರ್ಥಿ. ಅವರು ಈಗ ಮಂಡ್ಯ ಜಿಲ್ಲೆಯ ಹಿರಿಯ ನಾಯಕರಲ್ಲಿ ಒಬ್ಬರು. ಸಂಘವು ಅಕ್ಷರ ಪ್ರಚಾರ ಕೈಗೊಳ್ಳಲು 300 ರೂ. ಗಳನ್ನು ಮಂಜೂರು ಮಾಡಿತು. ಸಮಿತಿಯ ಕರೆಗೆ ಓಗೊಟ್ಟು 120 ಸ್ವಯಂಸೇವಕರು ಸಾಕ್ಷರತಾ ಪ್ರಚಾರ ಕೈಕೊಳ್ಳಲು ಮುಂದಾದರು. ಇದೊಂದು ಶುಭ ಸೂಚನೆ.

ವಯಸ್ಕರಿಗೆ ಓದು ಬರಹ ಕಲಿಸುವುದು ಅಷ್ಟೇನು ಸುಲಭವಾದ ಕಾರ್ಯವಲ್ಲ. ಆದ್ದರಿಂದ ಸ್ವಯಂಸೇವಕ ಉಪಾಧ್ಯಾಯರಿಗೆ ವಯಸ್ಕರ ಮನಶ್ಶಾಸ್ತ್ರ ಮತ್ತು ಬೋಧನಾ ಕ್ರಮದಲ್ಲಿ ತರಬೇತು ನೀಡುವುದು ಅನಿವಾರ್ಯ ಆಯಿತು. ಪ್ರಥಮ ತಂಡದ ಸ್ವಯಂಸೇವಕರನ್ನು ಶ್ರೀ ಎನ್. ಎಸ್. ಸುಬ್ಬರಾಯರು ಹರಸಿದರು. ಶ್ರೀ ಎನ್. ಎಸ್. ಸುಬ್ಬರಾಯರು ಆಗ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳು. ಒಳ್ಳೆಯ ಪ್ರಕಾಂಡ ಪಂಡಿತರು. ಶಾಲೆಗಳಲ್ಲಿ ಕನ್ನಡ ಮಾಧ್ಯಮವನ್ನು ಮೊದಲಾಗಿ ಬಳಕೆಗೆ ತಂದವರೂ ಅವರೇ.

ಸ್ವಯಂಸೇವಕರು ಯಾವ ಸಂಭಾವನೆಯಿಲ್ಲದೆ ವಯಸ್ಕರ ತರಗತಿಗಳನ್ನು ಶ್ರದ್ಧೆ ಮತ್ತು ಉತ್ಸಾಹದಿಂದ ನಡೆಸಿದರು. ತರಗತಿಗಳಿಗೆ ಬೇಕಾದ ಎಣ್ಣೆ ಮತ್ತು ದೀಪವನ್ನು ಆಯಾ ಕೇಂದ್ರವೇ ಒದಗಿಸಬೇಕಾಗಿತ್ತು. ತರಗತಿಯ ವಿದ್ಯಾರ್ಥಿಗಳು ಆಗಾಗ್ಗೆ ತರಗತಿಗಳಿಗೆ ಗೈರು ಹಾಜರಾಗುತ್ತಿದ್ದುದು ಅಂದಿನ ಸ್ವಯಂಸೇವಕ ಉಪಾಧ್ಯಾಯರ ಕೊರಗು. ತರಗತಿಗಳಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ದಾಖಲಾಗಿದ್ದ 470 ವಿದ್ಯಾರ್ಥಿಗಳ ಪೈಕಿ 197 ಮಂದಿ ತೇರ್ಗಡೆಯಾದರು. ಅವರೆಲ್ಲರಿಗೂ ಮೈಸೂರು ನಗರದ ಪುರ ಭವನದಲ್ಲಿ ಪ್ರಶಸ್ತಿ ಪತ್ರಿಕೆ ವಿತರಣಾ ಸಮಾರಂಭ ನಡೆಯಿತು. ಆಗಿನ ದಿವಾನರಾಗಿದ್ದ ಎನ್. ಮಾಧವರಾಯರು ಸಮಾರಂಭದ ಅಧ್ಯಕ್ಷತೆ ವಹಿಸಿ ಎಲ್ಲರಿಗೂ ಪ್ರಶಸ್ತಿ ಪತ್ರ ವಿತರಣೆ ಮಾಡಿದರು. ಪ್ರತಿ ಕೇಂದ್ರದ ಉಪಾಧ್ಯಾಯರು ತಮ್ಮ ಕೇಂದ್ರದ ಹೆಸರಿನ ಫಲಕವನ್ನು ಹಿಡಿದು ತಮ್ಮ ವಿದ್ಯಾರ್ಥಿಗಳೊಡನೆ ಮೆರವಣಿಗೆ ಹೊರಟು ಪುರಭವನ ಸೇರಿದರು. ಈ ತೆರನಾದ ಮೆರವಣಿಗೆ ಜನತೆಯನ್ನು ಹುರಿದುಂಬಿಸಿತು. ಹಾಗೂ ವಿದ್ಯಾರ್ಥಿಗಳನ್ನು ಚೇತನಗೊಳಿಸಿತು. ಅಂದಿನ ಮೆರವಣಿಗೆಯಲ್ಲಿ ಭಾಗವಹಿಸಿದ ಉಪಾಧ್ಯಾಯರಲ್ಲಿ ಈ ಗ್ರಂಥಕರ್ತನೂ ಒಬ್ಬ. ಅಂದಿನ ಮೆರವಣಿಗೆಯ ದೃಶ್ಯ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ.

ಸ್ವಯಂಸೇವಕ ಉಪಾಧ್ಯಾಯರ ಸಾಧನೆ ವಿಶ್ವವಿದ್ಯಾ ನಿಲಯದ ಸೆನೆಟ್ಟಿನ ಗಮನ ಸೆಳೆಯಿತು. ಅದು ಅಕ್ಷರ ಪ್ರಚಾರಕ್ಕೆ ಮೈಸೂರು ಮತ್ತು ಬೆಂಗಳೂರು ವಿದ್ಯಾರ್ಥಿ ಸಂಘ ಗಳಿಗೆ ತಲಾ 500 ರೂ.ಗಳನ್ನು ಮಂಜೂರು ಮಾಡಿತು. ಅವಶ್ಯ ಕತೆ ತೋರಿದಲ್ಲಿ ಇನ್ನೂ ಹೆಚ್ಚಿಗೆ ಹಣವನ್ನು ಮಂಜೂರು ಮಾಡುವುದಾಗಿ ಭರವಸೆ ನೀಡಿತು. ಆದರಿಂದ ವಿದ್ಯಾರ್ಥಿಗಳ ಉತ್ಸಾಹ ಇಮ್ಮಡಿ ಆಯಿತು. ನಿರಕ್ಷರತಾ ನಿವಾರಣಾ ಚಳುವಳಿಯನ್ನು ಗ್ರಾಮಾಂತರ ಪ್ರದೇಶಗಳಿಗೂ ಸಹ ಹರಡಲಾಯಿತು. ಕಾಲೇಜಿನ ವಿದ್ಯಾರ್ಥಿಗಳು ಬೇಸಿಗೆ ರಜಾ ಕಾಲದಲ್ಲಿ ಆವರವರ ಗ್ರಾಮಗಳಿಗೆ ವಾಪಸಾಗುತ್ತಿದ್ದರು. ಆವರಿಗೆ ತಮ್ಮ ಮನೆಯವರನ್ನು ಅಕ್ಷರಸ್ಥರನ್ನಾಗಿ ಮಾಡುವಂತೆ ಮನವಿ ಮಾಡಿಕೊಳ್ಳಲಾಯಿತು. ವಿದ್ಯಾರ್ಥಿಗಳು ಈ ಕರೆಗೆ ಓಗೊಟ್ಟು ಪಾಠೋಪಕರಣಗಳನ್ನು ತಮ್ಮೊಡನೆ ಒಯ್ದರು. ಹಳ್ಳಿಗೆ ಹೋಗದೆ ಉಳಿದ

Sri Vidyabharathi Book Centre, Sringeri

CC-O. In Public Domain. Digitized by eGangotri

ವಯಸ್ಕರ ಶಿಕ್ಷಣ ಚಳುವಳಿ ; ಇದೊಂದು ಪವಿತ್ರ ಸೇವೆ
ಇದರಲ್ಲಿ ವಿದ್ಯಾರ್ಥಿಗಳ ಪಾತ್ರ ಬಲು ದೊಡ್ಡದು

Sri Vidyabharathi Book Centre, Sringeri

CC-O. In Public Domain. Digitized by eGangotri

ವರು ಮೈಸೂರು ನಗರದಲ್ಲಿ ಸಾಕ್ಷರತಾ ಪ್ರಚಾರ ಕೈಕೊಂಡರು. ಈ ಶಾಲೆಗಳಿಗೆ ಅರಮನೆಯ ನೌಕರರು ಮತ್ತು ಇತರ ಇಲಾಖೆಯ ನೌಕರರು ಸೇರಿದ್ದು ಒಂದು ವೈಶಿಷ್ಟ್ಯ. ತರಗತಿಗಳಿಗೆ ಒಟ್ಟು ಸೇರಿದವರ ಸಂಖ್ಯೆ 650. ಅವರ ಪೈಕಿ 450 ಮಂದಿ ತೇರ್ಗಡೆ ಆದರು. ಮೈಸೂರು ಪುರಸಭೆ ಉಪಾಧ್ಯಾಯರಿಗೆ ಸಂಭಾವನೆ ಕೊಡಲು 500 ರೂ.ಗಳ ಚಂದಾ ನೀಡಿತು. ಈ ವೇಳೆಗೆ ಸಮಿತಿಯ ಕೆಲಸ ಅನೇಕ ಗ್ರಾಮ ಪಂಚಾಯಿತಿಗಳ ಮತ್ತು ಜಿಲ್ಲಾ ಬೋರ್ಡುಗಳ ಗಮನ ಸೆಳೆಯಿತು. ಅವು ತಮ್ಮ ಕ್ಷೇತ್ರ ಗಳಲ್ಲಿ ಅಕ್ಷರ ಪ್ರಚಾರ ಕೇಂದ್ರಗಳನ್ನು ತೆರೆಯುವಂತೆ ಸಮಿತಿಗೆ ಬೇಡಿಕೆ ಸಲ್ಲಿಸಿದವು. ಮೈಸೂರಿನ ಕೃಷ್ಣರಾಜೇಂದ್ರ ಬಟ್ಟೆ ಕಾರ್ಖಾನೆಯಲ್ಲಿ ತರಗತಿಗಳು ಆರಂಭವಾದವು. ಭದ್ರಾವತಿ ಉಕ್ಕಿನ ಕಾರ್ಖಾನೆ ತನ್ನ ಕಾರ್ಮಿಕರಿಗೆ ತರಗತಿಗಳನ್ನು ತೆರೆಯು ವಂತೆ ಕೇಳಿಕೊಂಡಿತು. ಉಕ್ಕಿನ ಕಾರ್ಖಾನೆಯಲ್ಲಿ ಕ್ರಮೇಣ ಒಂದು ಸಮಿತಿ ರಚನೆ ಆಯಿತು. ಒಟ್ಟಿನಲ್ಲಿ ಸಮಿತಿಯ ಕೆಲಸ ವಿಸ್ತಾರ ಆಯಿತು.

ವಿಶ್ವವಿದ್ಯಾನಿಲಯದ ಅಂದಿನ ಉಪಕುಲಪತಿಗಳು ಅಕ್ಷರ ಪ್ರಚಾರ ಚಳುವಳಿಯಲ್ಲಿ ಹೆಚ್ಚಿನ ವಿಶ್ವಾಸ ವ್ಯಕ್ತಪಡಿಸಿದರು. ಹಾಗೂ ಅದನ್ನು ಬೆಂಬಲಿಸಿದರು. "ವಯಸ್ಕರು ಆರು ತಿಂಗಳಲ್ಲಿ ಓದು ಬರಹ ಕಲಿತಲ್ಲಿ ಎಲ್ಲ ಪ್ರಾಥಮಿಕ ಶಾಲೆಗಳನ್ನು ಮುಚ್ಚಿ ವಯಸ್ಕರ ತರಗತಿಗಳನ್ನು ನಡೆಸುವಂತೆ ಸರಕಾರಕ್ಕೆ ಸಲಹೆ ಮಾಡುವೆ" ಎಂದು ಹೆಮ್ಮೆಯಿಂದ ಉಪಕುಲಪತಿಗಳು ಹೇಳಿ ದರು. 1940ರ ಆಖ್ಯೆರಿನಲ್ಲಿ ವಿಶ್ವವಿದ್ಯಾನಿಲಯದ ಬೆಳ್ಳಿಯ ಹಬ್ಬ ನಡೆಯಿತು. ಆ ಸಂದರ್ಭದಲ್ಲಿ ವಯಸ್ಕರ ಶಿಕ್ಷಣದ ವಸ್ತು ಪ್ರದರ್ಶನ ಏರ್ಪಾಡಾಯಿತು. ಬೆಳ್ಳಿಯ ಹಬ್ಬದ ಸಂಸ್ಮರಣ ಸಂಚಿಕೆಯಲ್ಲಿ ಅಕ್ಷರ ಪ್ರಚಾರ ಕುರಿತು ಒಂದು ಲೇಖನ ಪ್ರಕಟ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಯಿತು. ಇಷ್ಟಕ್ಕೆಲ್ಲಾ ಉಪಕುಲಪತಿಗಳ ಉತ್ಸಾಹವೇ ಕಾರಣ.

ಸಮಿತಿಯ ಕೆಲಸ ವಿಸ್ತಾರಗೊಂಡಂತೆ 1941ರ ವೇಳೆಗೆ ಉಪಸಮಿತಿ "ಮೈಸೂರು ಅಕ್ಷರ ಪ್ರಚಾರ ಸಮಿತಿ" ಎಂಬುದಾಗಿ ಪರಿವರ್ತನೆ ಆಯಿತು. ನಗರ ಸಭಾಧ್ಯಕ್ಷ, ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷ, ಜಿಲ್ಲಾ ವಿದ್ಯಾಧಿಕಾರಿ, ಪುರಸಭಾ ಸದಸ್ಯರು ಮತ್ತು ಕಾಲೇಜಿನ ಕೆಲವು ಅಧ್ಯಾಪಕರು ಸಮಿತಿಯ ಸದಸ್ಯರು. ಅಂದಿನ ಪುರಸಭಾಧ್ಯಕ್ಷ ನವನೀತಂ ನಾಯಿಡು, ಉಪಾಧ್ಯಕ್ಷ ಶ್ರೀ ಟಿ. ಮರಿಯಪ್ಪನವರು ಸಮಿತಿಯ ಕಾರ್ಯ ದರ್ಶಿಯೊಡನೆ ಸಹಕರಿಸಿದರು. ಅವರೊಡನೆ ಮೊಹಲ್ಲಾಗಳಲ್ಲಿ ಸಂಚರಿಸಿ ತರಗತಿಗಳನ್ನು ತೆರೆಯಲು ಪ್ರಚಾರ ಕೈಕೊಂಡರು. ಅನೇಕ ಮಂದಿ ವಿದ್ಯಾರ್ಥಿಗಳು, ಸರಕಾರಿ ಅಧಿಕಾರಿಗಳು ಮತ್ತು ವಿದ್ಯಾವಂತರು ತರಗತಿಗಳನ್ನು ನಡೆಸಲು ಮುಂದಾದರು. ಮಹಾರಾಜ ಕಾಲೇಜಿನಲ್ಲಿ ಬಿ. ಎ. ತರಗತಿಯಲ್ಲಿ ಶ್ರೀ ಎಂ. ವಿ. ಕೃಷ್ಣಪ್ಪನವರು ವ್ಯಾಸಂಗ ಮಾಡುತ್ತಿದ್ದರು. ಪಟ್ಟಾಭಿ ರಾಮಯ್ಯನವರು ಪಂಡಿತ ತರಗತಿಯಲ್ಲಿದ್ದರು. ಇವರಿಬ್ಬರು ಒಪ್ಪೊತ್ತಿನ ಮೇಲ್ವಿಚಾರಕರಾಗಿ ಸೇವೆ ಸಲ್ಲಿಸಲು ಒಪ್ಪಿದರು. ಎಂ. ವಿ. ಕೃಷ್ಣಪ್ಪನವರು ಆಗಸ್ಟ್ 1942ರಲ್ಲಿ ನಡೆದ ಚಳುವಳಿಯಲ್ಲಿ ಹೋರಾಡಿದರು. ಕೇಂದ್ರ ಸರಕಾರದ ಮಂತ್ರಿಗಳಾಗಿ ಸೇವೆ ಸಲ್ಲಿಸಿದ ವ್ಯಕ್ತಿ.

ಇತ್ತಲಾಗಿ ಬೆಂಗಳೂರಿನಲ್ಲಿ ಕನ್ನಡದ ಕಣ್ವ ಹಾಗೂ ನಿವೃತ್ತ ಇಂಗ್ಲೀಷ್ ಪ್ರಾಧ್ಯಾಪಕ ಬಿ. ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆ ಆಯಿತು. ಕಾರ್ಮಿಕ ಮುಖಂಡ ಟಿ. ಕೆ. ಆಹೋಬಳಾಚಾರ್ ಅದರ ಕಾರ್ಯದರ್ಶಿ. ಯೂನಿವರ್ಸಿಟಿ ಸೆಟಲ್‌ಮೆಂಟಿನ ನೆರವಿನಿಂದ ಕಾರ್ಮಿಕರಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನೇಕ ತರಗತಿಗಳು ಪ್ರಾರಂಭವಾದವು. ಮಂಡ್ಯ ಜಿಲ್ಲಾ ಬೋರ್ಡು ತನ್ನ ಕ್ಷೇತ್ರದಲ್ಲಿ ತರಗತಿಗಳನ್ನು ತೆರೆಯುವಂತೆ ಬೇಡಿಕೆಯನ್ನು ಸಲ್ಲಿಸಿತು. ಈ ವೇಳೆಗೆ ಸಮಿತಿ ಇಡೀ ಸಂಸ್ಥಾನಕ್ಕೆ ಅನ್ವಯವಾಗುವಂತೆ ಅಕ್ಷರ ಪ್ರಚಾರ ಯೋಜನೆಯನ್ನು ತಯಾರಿಸಿತು. ಆಗತಾನೇ ಜನಪ್ರಿಯ ಮುಖಂಡ ಮಹಮದ್ ಇಮಾಂ ವಿದ್ಯಾಮಂತ್ರಿ ಆಗಿದ್ದರು. 1941ರ ಆಗಸ್ಟ್ ತಿಂಗಳಿನಲ್ಲಿ ಅಕ್ಷರ ಪ್ರಚಾರದಲ್ಲಿ ನಿರತರಾಗಿದ್ದವರ ಸಭೆಯನ್ನು ಕರೆದರು. ಮಹಮದ್ ಇಮಾಂರವರ ಅಧ್ಯಕ್ಷತೆಯಲ್ಲಿ ಆ ಸಭೆ ನಡೆಯಿತು. ತತ್ಫಲವಾಗಿ ಅಕ್ಷರ ಪ್ರಚಾರ ಕಾರ್ಯವನ್ನು ಇಡೀ ಸಂಸ್ಥಾನಕ್ಕೆ ವಿಸ್ತರಿಸುವ ನಿರ್ಧಾರ ಕೈಕೊಳ್ಳಲಾಯಿತು. ಅದಕ್ಕೆ ಅನುಕೂಲವಾಗುವಂತೆ ಒಂದು ಕೇಂದ್ರ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಅಭಿಪ್ರಾಯಪಡಲಾಯಿತು. ಸಂಸ್ಥೆಯ ಆಡಳಿತ ನೋಡಿಕೊಳ್ಳಲು ವಿದ್ಯಾ ಇಲಾಖೆಯಿಂದ ಒಬ್ಬ ಅಧಿಕಾರಿಯನ್ನು ನಿಯೋಜಿಸುವಂತೆ ಕೇಳಿಕೊಳ್ಳಲಾಯಿತು. ಅನಂತರ ಬೆಂಗಳೂರಿನಲ್ಲಿ ವಯಸ್ಕರ ಶಿಕ್ಷಣ ಕಾರ್ಯಕರ್ತರೆಲ್ಲರ ಸಭೆ ನಡೆಯಿತು. ಅಂದು ಮೈಸೂರು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿ ಜನ್ಮ ತಾಳಿತು. ಬಿ. ಎಂ. ಶ್ರೀಕಂಠಯ್ಯನವರು ಅಧ್ಯಕ್ಷರಾಗಿಯೂ, ಡಬ್ಲ್ಯು. ಜಿ. ಈಗಲ್ಟನ್ ಉಪಾಧ್ಯಕ್ಷರಾಗಿಯೂ ಮತ್ತು ಟಿ. ಕೃಷ್ಣಮೂರ್ತಿ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾದರು. ಸರಕಾರ ಸಮಿತಿಗೆ ಎಸ್. ವಿ. ಶ್ರೀನಿವಾಸರಾಯರ ಸೇವೆಯನ್ನು ಎರವಲಾಗಿ ನೀಡಿತು. ಪ್ರೊಫೆಸರ್ ಡಬ್ಲ್ಯು. ಜಿ. ಈಗಲ್ಟನ್ ಅವರ ಬಂಗಲೆಯ ಒಂದು ಕಟ್ಟಡ ಕಛೇರಿಯಾಗಿ ಪರಿವರ್ತನೆ ಆಯಿತು. ವಿಶ್ವವಿದ್ಯಾನಿಲಯದ ಪೀಠೋಪಕರಣಗಳನ್ನು ಆಗಿದ್ದ ಉಪಕುಲಪತಿ ಎನ್. ಎಸ್. ಸುಬ್ಬರಾಯರು ಕೊಡಲು ಒಪ್ಪಿದರು. ಸರಕಾರ 1941–42ನೆಯ ಸಾಲಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

5,000 ರೂ. ಅನುದಾನ ನೀಡಿತು. ರೈಲ್ವೆ ಇಲಾಖೆ ಆಗ ಮೈಸೂರು ಸಂಸ್ಥಾನದ ವಶದಲ್ಲಿತ್ತು. ಸಮಿತಿಯ ಕಾರ್ಯದರ್ಶಿಗಳು ಸಂಸ್ಥಾನಾದ್ಯಂತ ಪ್ರವಾಸ ಮಾಡಲು ಎರಡನೆಯ ದರ್ಜೆಯ ಪಾಸನ್ನು ಪುಕ್ಕಟೆಯಾಗಿ ರೈಲ್ವೆ ಇಲಾಖೆ ನೀಡಿತು.

ಪ್ರಾರಂಭದಲ್ಲಿ ಮೈಸೂರು ಸಂಸ್ಥಾನದ ಸರಕಾರ ಸಮಿತಿಯ ಬೆಳವಣಿಗೆಗೆ ಹೆಚ್ಚಿನ ಬೆಂಬಲ ನೀಡಿತು. ಅದೇ ತೆರನಾದ ಸಹಕಾರವನ್ನು ಕರ್ನಾಟಕ ರಾಜ್ಯ ಸರಕಾರವೂ ಸಹ ನಡೆಸಿಕೊಂಡು ಬಂದಿದೆ. ಆಗಾಗ್ಗೆ ರಾಜ್ಯ ಸರಕಾರ ಸಮಿತಿಯ ಕೆಲಸದ ಬಗ್ಗೆ ರಚನಾತ್ಮಕ ಸಲಹೆಗಳನ್ನು ನೀಡುತ್ತಾ ಬಂದಿದೆ. ಇಡೀ ಭಾರತದಲ್ಲಿ ಕರ್ನಾಟಕ ರಾಜ್ಯ ಸರಕಾರ ನೀಡುವಷ್ಟು ಸಹಕಾರವನ್ನು ಇನ್ನಾವ ರಾಜ್ಯ ಸರಕಾರವೂ ನೀಡುತ್ತಿಲ್ಲ. ಸಮಿತಿಯ ನೌಕರರಿಗೆ, ಸರಕಾರದ ನೌಕರರಿಗೆ ಆಗಿಂದಾಗ್ಗೆ ದೊರೆಯುವ ವೇತನಗಳನ್ನು ನೀಡುತ್ತಲಿದೆ. ಸಮಿತಿಯ ಕಾರ್ಯಕರ್ತರಿಗೆ ನಿವೃತ್ತಿ ವೇತನ ಸೌಲಭ್ಯವಿದೆ. ಇವೆಲ್ಲಾ ಸೌಲಭ್ಯಗಳಿದ್ದರೂ ಕೆಲಸ ನಿರೀಕ್ಷಿಸಿದಷ್ಟು ತೃಪ್ತಿಕರವಾಗಿಲ್ಲ. ಒಂದು ಕಾಲಕ್ಕೆ ಸರಕಾರದ ಅನುದಾನ ಕಾಲಕ್ಕೆ ಸರಿಯಾಗಿ ಬರುತ್ತಿರಲಿಲ್ಲ. ಆದರಿಂದ ಕೆಲಸಗಾರರಿಗೆ ಪ್ರತಿ ತಿಂಗಳು ಕ್ರಮವಾಗಿ ಸಂಬಳ ಬಟವಾಡೆ ಇರಲಿಲ್ಲ. ಆದರೂ ಆಗಿನ ಕೆಲಸಗಾರರಿಗೆ ಕೆಲಸದಲ್ಲಿ ಇದ್ದ ಉತ್ಸಾಹ ಇಂದು ಕಂಡುಬರುತ್ತಿಲ್ಲ. ಸರಕಾರ ಸಮಿತಿಯ ವಿಚಾರದಲ್ಲಿ ಹೆಚ್ಚು ವಿಶ್ವಾಸ ಇಟ್ಟಿದೆ. ಸರಕಾರ ಸಮಿತಿಯು ಕೆಲವು ಕಾರ್ಯಕ್ರಮಗಳನ್ನು(1965)ತೆಗೆದುಕೊಳ್ಳುವಂತೆ ಆಜ್ಞೆ ಮಾಡಿತು. ಅನಂತರ ಅದು ಸರಿಯಾಗಿ ಕಾಣಬರದದ್ದರಿಂದ ಆಜ್ಞೆಯನ್ನು ವಾಪಸ್ಸು ಪಡೆಯಿತು. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಮೈಸೂರು ವಿಶ್ವವಿದ್ಯಾಲಯ ಸಾಕಿದ ಕೂಸು. ಸರಕಾರ ಆದನ್ನು ಚೆನ್ನಾಗಿ ಪೋಷಿಸಿಕೊಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂದಿದೆ. ಮೈಸೂರು ವಿಶ್ವವಿದ್ಯಾನಿಲಯ ಸಮಿತಿಗೆ ಕಟ್ಟಡ ಕಟ್ಟಲು ತನ್ನ ಆವರಣದಲ್ಲಿ 400 ಅಡಿ ಉದ್ದ 400 ಅಡಿ ಅಗಲ ಇರುವ ಜಾಗವನ್ನು ಮುಫತ್ತಾಗಿ ಕೊಟ್ಟಿದೆ.

ಸಮಿತಿ ಪ್ರಾರಂಭದಲ್ಲಿ ಕೇವಲ ಅಕ್ಷರ ಪ್ರಚಾರ ಕೈಕೊಂಡಿತು. ಅನಂತರ ಅದು ಕಾರ್ಯವನ್ನು ಕೆಳಗೆ ಕಂಡಂತೆ ವಿಸ್ತರಿಸಿತು. 1) ಅಕ್ಷರ ಪ್ರಚಾರ 2) ವಿದ್ಯಾಮಂದಿರ 3) ಪುಸ್ತಕ ಭಂಡಾರ 4) ವಿದ್ಯಾಪೀಠಗಳು 5) ಗ್ರಾಮಸೇವಾ ಶಿಬಿರಗಳು 6) ಪ್ರಕಟಣೆಗಳು 7) ಚಲನಚಿತ್ರ ಪ್ರದರ್ಶನ 8) ಗ್ರಾಮ ಕೆಲಸಗಳು 9) ಜನತಾ ಶಿಕ್ಷಣ ಕೇಂದ್ರಗಳು 10) ಸಂಶೋಧನೆ. ಸಮಿತಿ 1945ರಲ್ಲಿ ತನ್ನ ಕಾರ್ಯಚಟುವಟಿಕೆಗಳಿಗೆ ಅನುಸಾರವಾಗಿ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಎಂದು ಹೆಸರನ್ನು ಬದಲಾಯಿಸಿಕೊಂಡಿತು.

ಅಕ್ಷರ ಪ್ರಚಾರ

ಇದು ಸಮಿತಿಯ ಪ್ರಧಾನ ಕಾರ್ಯಕ್ರಮ ಹಾಗೂ ಪ್ರಾರಂಭದಲ್ಲಿ ಇದೊಂದೇ ಕಾರ್ಯಕ್ರಮವಾಗಿತ್ತು. ಸಮಿತಿ ಸಾಕ್ಷರತಾ ಪ್ರಚಾರದಲ್ಲಿ ಸಾಕಷ್ಟು ಅನುಭವ ಗಳಿಸಿದೆ. ವಯಸ್ಕರಿಗೆ ಓದು ಬರಹ ಕಲಿಸಲು 108 ಘಂಟೆಗಳು ಸಾಕು ಎಂಬುದು ಸಮಿತಿಯ ಅನುಭವ. ಅಖಿಲ ಭಾರತ ಶಿಕ್ಷಣ ಸಲಹಾ ಸಮಿತಿಯ ಪ್ರಕಾರ ಓದು ಬರಹ ಕಲಿಸುವ ಅವಧಿ 100 ಘಂಟೆಗಳು.

ವಯಸ್ಕರಿಗೆ ಓದು ಬರಹ ಕಲಿಸಲು ಸೂಕ್ತ ಪಠ್ಯಪುಸ್ತಕಗಳು ಬೇಡವೆ? ಈ ಕ್ಷೇತ್ರದಲ್ಲಿ ಹಲವಾರು ಪ್ರಯೋಗಗಳು ನಡೆದಿವೆ. ದೇವುಡು ನರಸಿಂಹಶಾಸ್ತ್ರಿಗಳು ಸ್ವಲ್ಪ ಮಾರ್ಪಾಡು ಮಾಡಿದ ವರ್ಣಮಾಲಾ ಪದ್ಧತಿಯನ್ನು ಅನುಸರಿಸಿ ಪಠ್ಯಪುಸ್ತಕ ರಚಿಸಿ ಹಲವು ಕಡೆಗಳಲ್ಲಿ ಪ್ರಯೋಗ ನಡೆಸಿರುವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅನ್ನದಾನಕ್ಕಿಂತ ಮಿಗಿಲು ವಯಸ್ಕರಿಗೆ ವಿದ್ಯಾದಾನ.
ಇದು ವಿಸ್ತಾರವಾದ ಯೋಜನೆ, ಅದಕ್ಕೆ ಗಹನವಾದ ಯೋಚನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆ. ಎಸ್. ಆಚಾರ್ಲುರವರು ಕ್ರೈಸ್ತಮಿಷನರಿಗಳ ಕೋರಿಕೆ ಮೇಲೆ ಡಾ. ಲಾಬಕ್ ಪದ್ಧತಿಗೆ ಅನುಗುಣವಾದ ಪಠ್ಯಪುಸ್ತಕ ರಚಿಸಿದರು.

ಶಿವಮೊಗ್ಗ ಕರ್ನಾಟಕ ಸಂಘದ ಕೋರಿಕೆಯ ಮೇಲೆ ಎಂ. ಆರ್. ಶ್ರೀನಿವಾಸಮೂರ್ತಿಗಳು ವಯಸ್ಕರಿಗೆ ಒಂದು ಪಠ್ಯ ಪುಸ್ತಕ ರಚಿಸಿದರು. ಪ್ರಾರಂಭದಲ್ಲಿ ವಯಸ್ಕರ ಶಿಕ್ಷಣ ಸಮಿತಿಯೂ ಸಹ ಅದೇ ಪುಸ್ತಕಗಳನ್ನು ಬಳಸಿತು. ಈ ಪಠ್ಯ ಪುಸ್ತಕದಲ್ಲಿ ಕೆಲವು ನ್ಯೂನತೆಗಳು ಕಂಡುಬಂದವು. ಆದಕಾರಣ ಪ್ರತ್ಯೇಕ ಪಠ್ಯಪುಸ್ತಕ ರಚಿಸಲು ಒಂದು ಸಮಿತಿ ರಚನೆ ಆಯಿತು. ಅದರಿಂದ ತಯಾರಾದ ಪಠ್ಯಪುಸ್ತಕಗಳು ಅನೇಕ ಬಾರಿ ಮುದ್ರಣವಾಗಿದೆ.

1965ರಲ್ಲಿ ಇಡೀ ವಿಶ್ವದಲ್ಲಿ ಅಕ್ಷರ ಪ್ರಚಾರಕ್ಕೆ ಒಂದು ಕ್ರಾಂತಿಕಾರಕ ತಿರುವು ಉಂಟಾಗಿದೆ. 1965ರ ಸೆಪ್ಟಂಬರಿನಲ್ಲಿ ಇರಾನಿನಲ್ಲಿ ಯುನೆಸ್ಕೊ ಒಂದು ವಯಸ್ಕರ ಶಿಕ್ಷಣ ವಿಶ್ವ ಸಮ್ಮೇಳನವನ್ನು ಕೂಡಿಸಿತು. ಅಲ್ಲಿ ಸಾಕ್ಷರತೆ ಕ್ರಿಯಾತ್ಮಕ ವಾಗಿರತಕ್ಕದ್ದು ಎಂಬ ನಿರ್ಧಾರವನ್ನು ಕೈಕೊಳ್ಳಲಾಯಿತು. ರೈತರು ಮತ್ತು ಕಾರ್ಮಿಕರು ರಾಷ್ಟ್ರದ ಉತ್ಪನ್ನಕ್ಕೆ ಕಾರಣರು. ಸಾಕ್ಷರತೆ ಕೃಷಿಗೆ ಸಂಬಂಧಪಟ್ಟಂತೆ ಇರತಕ್ಕದ್ದು. ಕೃಷಿ ವಿಜ್ಞಾನ ಕ್ಷೇತ್ರದಲ್ಲಿ ಶಕ್ತಿಮಾನ ತಳಿಗಳು ಅನುಷ್ಠಾನಕ್ಕೆ ಬಂದಿದೆ. ಶಕ್ತಿ ಮಾನ ತಳಿಗಳ ಬೇಸಾಯ ಸೂಕ್ಷ್ಮ. ಆದರೂ ಒಂದಕ್ಕೆ ಮೂರು ಪಟ್ಟು ಉತ್ಪನ್ನ ಕೊಡುವ ತಳಿಗಳು. ಭಾರತ ಸರಕಾರ1967–68 ರಲ್ಲಿ ಶಕ್ತಿಮಾನ್ ತಳಿಗಳಿಗೆ ಸಂಬಂಧಪಟ್ಟಂತೆ ಸಾಕ್ಷರತಾ ಕಾರ್ಯ ಕ್ರಮವನ್ನು ಕೈಕೊಂಡಿತು. ಸಮಿತಿಯ ಪರವಾಗಿ ಈ ಗ್ರಂಥ ಕರ್ತರು "ಬಾ ಅಣ್ಣ ಓದು ಕಲಿ, ಹೆಚ್ಚು ಬೆಳೆ ಬೆಳಿ" ಎಂಬ ಪಠ್ಯ ಪುಸ್ತಕ ರಚಿಸಿರುವರು ಜೊತೆಗೆ ಪೂರಕ ಪುಸ್ತಕಗಳೂ ಸಹ ತಯಾ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗಿವೆ. ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ, ವಿಶ್ವ ಸಾಕ್ಷರತಾ ಕಾರ್ಯಕ್ರಮ–ಈ ಕಾರ್ಯಕ್ರಮವೂ ಸಹ ನಿರೀಕ್ಷಿಸಿದ ಫಲ ನೀಡ ಲಿಲ್ಲ. ಜನತೆ ಕೇವಲ ಆಹಾರಕ್ಕೆ ಬದುಕಿಲ್ಲ. ಆಹಾರದ ಜೊತೆಗೆ ಆರೋಗ್ಯ, ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸಮಸ್ಯೆಗಳ ಕಡೆಗೆ ಗಮನ ಅಗತ್ಯ. ಸಾಕ್ಷರತೆ ಇಡೀ ಜೀವನದ ವಿಕಾಸಕ್ಕೆ ಅನುವಾಗಬೇಕು. ಸಾಕ್ಷರತೆಯ ಜೊತೆಗೆ ಅರಿವು ಮತ್ತು ಕ್ರಿಯಾತ್ಮಕತೆಯ ಅಂಶಗಳನ್ನೂ ಸಹ ಅಳವಡಿಸು ವುದು ಅಗತ್ಯ.

ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯ ಸ್ವರೂಪ

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಐದು ಪಂಚ ವಾರ್ಷಿಕ ಯೋಜನೆಗಳು ಕಳೆದಿವೆ. ಈ ಯೋಜನೆಗಳಿಂದ 96.911 ಕೋಟಿ ರೂಪಾಯಿಗಳು ವಿನಿಯೋಗ ಆಗಿದೆ. ಆದರೂ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಶೇಕಡ 46 ಮಂದಿ ಬಡತನದ ರೇಖೆಯ ಅಂಚಿನಲ್ಲಿ ಇದ್ದಾರೆ. ಇವರೆಲ್ಲಾ ಹೆಚ್ಚಾಗಿ ಹರಿಜನರು, ಗಿರಿಜನರು ಮತ್ತು ಮಹಿಳೆಯರು. ಇವ ರಿಗೆ ಪರಿಸರದ ಪ್ರಜ್ಞೆ ಇಲ್ಲ. ಸರಕಾರದ ಸೌಲಭ್ಯಗಳ ಅರಿವಿಲ್ಲ. ಹೀಗಾಗಿ ಸರಕಾರದ ಸೌಲಭ್ಯಗಳನ್ನು ಕಬಳಿಸುವವರು ಕೇವಲ ಕೆಲವು ಮಂದಿ ಮಧ್ಯವರ್ತಿಗಳು. ಆವರ ಸಂಖ್ಯೆ ಕೇವಲ ಬೆರಳಿ ನಲ್ಲಿ ಎಣಿಸುವಷ್ಟು. ಈ ದೃಷ್ಟಿಯಿಂದ ದೀನಧುರ್ಬಲ ವರ್ಗದ ವರಿಗೆ ಪರಿಸರದ ಪ್ರಜ್ಞೆ ಉಂಟುಮಾಡಬೇಕು. ಜೊತೆಗೆ ಸರಕಾರದ ವಿವಿಧ ಅಭಿವೃದ್ಧಿ ಇಲಾಖೆಗಳು ನೀಡುವ ಸೌಲಭ್ಯ ಗಳನ್ನು ತಮ್ಮ ಮತ್ತು ಸಮಾಜದ ಏಳಿಗೆಗೆ ಬಳಸಿಕೊಳ್ಳುವಂತೆ ಮಾಡಬೇಕು. ಇದೇ ರಾಷ್ಟ್ರೀಯ ವಯಸ್ಕರ ಶಿಕ್ಷಣದ ಗುರಿ. ಈ ಯೋಜನೆಯನ್ನು ಜನತಾ ಸರಕಾರ 1978ರಲ್ಲಿ ಕೈಕೊಂಡಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಷ್ಟ್ರೀಯ ವಯಸ್ಕರ ಶಿಕ್ಷಣದ ವೈಶಿಷ್ಟ್ಯ ಹೀಗಿದೆ : ಈಗ ಕೈಗೊಂಡಿರುವ ಯೋಜನೆ ಬೃಹತ್ ಪ್ರಮಾಣದ್ದು. ಈ ಯೋಜನೆಗೆ ಭಾರತ ಸರಕಾರ 686 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಇಂತಹ ಬೃಹತ್ ಯೋಜನೆ ಕೇವಲ ಸರಕಾರದಿಂದ ಮಾತ್ರ ಸಾಧ್ಯವಿಲ್ಲ. ಆದ್ದರಿಂದ ಖಾಸಗಿ ಸಂಘ ಸಂಸ್ಥೆಗಳು ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ ಪರಿಣಾಮಕಾರಿ ಆಗಿ ಪಾಲುಗೊಳ್ಳಲು ಅವಕಾಶ ಕಲ್ಪಿಸಿದೆ. ಈವರೆವಿಗೆ 603 ಸಂಘ ಸಂಸ್ಥೆಗಳು ಪಾಲುಗೊಂಡಿವೆ. ವಿಶಾಲ ಭಾರತದ ಹಿನ್ನೆಲೆಯಲ್ಲಿ ಈ ಸಂಖ್ಯೆ ಅತ್ಯಲ್ಪ. ಇಂತಹ ಬೃಹತ್ ಯೋಜನೆಗಳ ಯಶಸ್ವಿಗೆ ರಾಜಕೀಯ ದೃಢ ನಿರ್ಧಾರ ಅಗತ್ಯ. ಅಂತೆಯೇ ಏಪ್ರಿಲ್ 1977ರ ಲೋಕಸಭೆಯಲ್ಲಿ ಎಲ್ಲ ಪಕ್ಷಗಳು ಒಟ್ಟಾಗಿ ತಮ್ಮ ಒಪ್ಪಿಗೆಯನ್ನು ನೀಡಿದೆ. ಈ ಯೋಜನೆ ಕೇವಲ ವಿದ್ಯಾ ಇಲಾಖೆಗೆ ಮಾತ್ರ ಸೀಮಿತವಲ್ಲ. ಎಲ್ಲ ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮ ಇದು. ಹಿಂದಿನ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳ ಸಾಫಲ್ಯ ಮತ್ತು ವೈಫಲ್ಯಗಳ ಹಿನ್ನೆಲೆಯಲ್ಲಿ ಸುಧಾರಿಸಿದ ಕಾರ್ಯಕ್ರಮ ಇದು. ಕಲಿಯುವವರ ಆಸಕ್ತಿ, ಅಭಿರುಚಿ ಮತ್ತು ಅಗತ್ಯಗಳಿಗೆ ಅನುಸಾರವಾದ ಕಾರ್ಯಕ್ರಮ. ಆತನ ಸಮಸ್ಯೆಗಳಿಗೆ ಪರಿಹಾರ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಉದ್ದೇಶ. ವ್ಯಕ್ತಿಯ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸಿದ ಸಾಕ್ಷರತೆ ಆಕರ್ಷಣೆಯನ್ನುಂಟುಮಾಡದು. ಸಮಾಜದ ದೀನದುರ್ಬಲ ವರ್ಗದವರು ಮತ್ತು ಮಹಿಳೆಯರಿಗೆ ಈ ಯೋಜನೆಯಲ್ಲಿ ಹೆಚ್ಚಿನ ಆದ್ಯತೆ ಇದೆ.

ಹೊಸ ಯೋಜನೆಯ ಗುರಿ ಮೂರು : ಸಾಕ್ಷರತೆ, ಅರಿವು ಮತ್ತು ಕ್ರಿಯಾತ್ಮಕತೆ. ಈ ಮೂರು ಅಂಶಗಳು ಕೂಡಿದ ಪಠ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಸ್ತಕ ಮತ್ತು ಪೂರಕ ಪುಸ್ತಕಗಳು ಬೇಕು. ಜೊತೆಗೆ ಯೋಜನೆಯಲ್ಲಿ ನಿರತರಾದ ವಿವಿಧ ಹಂತದ ಕಾರ್ಯಕರ್ತರಿಗೆ ತರಬೇತು ಆಗತ್ಯ. ಮೂರನೆಯದಾಗಿ ವಯಸ್ಕರ ಶಿಕ್ಷಣ ಹೊಸ ದಾರಿಗಳನ್ನು ಕಂಡುಹಿಡಿಯಲು ಸಂಶೋಧನೆ ಬೇಕೇ ಬೇಕು. ಈ ದೃಷ್ಟಿಯಿಂದ ಪ್ರತಿಯೊಂದು ರಾಜ್ಯಕ್ಕೂ ಒಂದೊಂದು ರಾಜ್ಯ ಸಂಪನ್ಮೂಲ ಕೇಂದ್ರವನ್ನು ಭಾರತ ಸರಕಾರ ಮಂಜೂರು ಮಾಡಿದೆ. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲೂ ಅಂತಹ ಸಂಪನ್ಮೂಲ ಕೇಂದ್ರ ನಡೆಯುತ್ತಿದೆ. ಕರ್ನಾಟಕ ರಾಜ್ಯ ಸರಕಾರ ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯಲ್ಲಿ ಪಾಲುಗೊಂಡಿದೆ. ಅದಕ್ಕಾಗಿ 29 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದೆ. ಯೋಜನೆಗೆ ಒಳಗಾಗುವ ನಿರಕ್ಷರರ ಸಂಖ್ಯೆ 67.56 ಲಕ್ಷ ಮಂದಿ.

ವಿದ್ಯಾಮಂದಿರ

ವಯಸ್ಕರಿಗೆ ಓದು ಬರಹ ಕಲಿಸುವುದು ಮೊದಲನೆಯ ಹಂತ. ಕಲಿತದ್ದನ್ನು ಉಳಿಸಿಕೊಳ್ಳುವಂತೆ ಮಾಡುವುದು ಎರಡನೆಯ ಹಂತ. ಅವರು ಓದು ಬರಹ ಕಲಿಯುವುದೂ ಬೇಗ, ಮರೆಯುವುದೂ ಬೇಗ. ಪ್ರಾರಂಭದಲ್ಲಿ ಅಕ್ಷರ ಪ್ರಚಾರ ಕೇಂದ್ರಗಳು ಮೈಸೂರು ನಗರದ ಕಛೇರಿಗಳಲ್ಲಿ ವಯಸ್ಕರ ತರಗತಿಗಳ ವ್ಯವಸ್ಥೆ ಮಾಡಿದವು. ಆ ತರಗತಿಗಳಿಗೆ ಮೊದಲು ಸೇರಿದ್ದ ವಿದ್ಯಾರ್ಥಿಗಳೇ ಪುನಃ ಬಂದಿದ್ದರು. ಅವರು ಕಲಿತಿದ್ದ ಓದನ್ನು ಮರೆತಿದ್ದು ಸ್ವಾಭಾವಿಕ. ಕಾರಣ ಕಲಿತಿದ್ದನ್ನು ಉಳಿಸಿಕೊಳ್ಳಲು ಪೂರಕ ಸಾಹಿತ್ಯ ಇರಲಿಲ್ಲ. ಆದರ ಇನ್ನೊಂದು ಸ್ವರೂಪ ನೋಡೋಣ. ಓದು ಬರಹ ಕಲಿತಿದ್ದ ವಿದ್ಯಾರ್ಥಿಗಳು ದಾರಿಯಲ್ಲಿ ಹೋಗುತ್ತಿದ್ದಾಗ ಕಂಡುಬಂದ ನಾಮಫಲಕಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಕುತೂಹಲದಿಂದ ತಡವರಿಸಿಕೊಂಡು ಓದುತ್ತಿದ್ದುದು ವಯಸ್ಕರ ಶಿಕ್ಷಣ ಕಾರ್ಯಕರ್ತರ ಗಮನಕ್ಕೆ ಬಂತು. ಇನ್ನು ಕೆಲವರು ಒಬ್ಬರ ಮೇಲೊಬ್ಬರು ಗುಂಪು ಕೂಡಿಕೊಂಡು ವೃತ್ತ ಪತ್ರಿಕೆಗಳನ್ನು ವೀಕ್ಷಿಸುತ್ತಿದ್ದುದು ಆಶ್ಚರ್ಯದ ಸಂಗತಿ. ಈ ಸನ್ನಿವೇಶವನ್ನು ತಿಳಿದು ಮೂರು ಹಂತಗಳಲ್ಲಿ ಸಮಿತಿ "ವಯಸ್ಕರ ಶಿಕ್ಷಣ ಮಾಲೆ" ಎಂಬ ಹೆಸರಿನಲ್ಲಿ ಪುಸ್ತಕಗಳನ್ನು ಪ್ರಕಟಿಸಲು ಯೋಚಿಸಿತು. ಜೊತೆಗೆ ತರಗತಿಯ ವಿದ್ಯಾರ್ಥಿಗಳ ಹಾಗೂ ನವಸಾಕ್ಷರರ ಸಲುವಾಗಿ 'ಬೆಳಕು' ವಾರಪತ್ರಿಕೆಯನ್ನು ಪ್ರಕಟಿಸುತ್ತಿದೆ. ಬೆಳಕು ಪತ್ರಿಕೆಯ ಪ್ರಪ್ರಥಮ ಸಂಚಿಕೆ ಬಿಡುಗಡೆ ಆದದ್ದು 1942ರ ದೀಪಾವಳಿ ದಿನ. ಆದರ ಪ್ರಥಮ ಸಂಪಾದಕರು ಡಿ. ಕೃಷ್ಣಯ್ಯಂಗಾರ್. ಅವರು ಗ್ರಾಮೀಣ ಸಮಸ್ಯೆಗಳನ್ನು ಕುರಿತು ಹಲವಾರು ಪುಸ್ತಕಗಳನ್ನು ರಚಿಸಿದ್ದರು. ಅವರು ಸರ್ವೆಜಿ ಸ್ಯಾರ್ ಆಗಿದ್ದರು. ಬೆಳಕು ಪತ್ರಿಕೆಯಲ್ಲಿ ವಿಚಾರ ವೇದಿಕೆಗೆ ಅವಕಾಶ ಇತ್ತು. ಒಂದು ಸಾರಿ ವಯಸ್ಕರ ತರಗತಿಯ ಒಬ್ಬ ವಿದ್ಯಾರ್ಥಿ "ಸ್ವರಾಜ್ಯ ಎಂದರೇನು" ಎಂಬ ಪ್ರಶ್ನೆ ಬೆಳಕು ಸಂಪಾದಕರಿಗೆ ಕೇಳಿದ್ದ. ಅದರ ಪರಿಣಾಮ ಡಿ. ವಿ. ಗುಂಡಪ್ಪನವರಿಂದ ಆ ವಿಷಯದ ಮೇಲೆ ಒಂದು ಪುಸ್ತಕ ಬರೆಸಲಾಯಿತು.

ಬೆಳಕು ಪತ್ರಿಕೆಯಲ್ಲಿ ವಯಸ್ಕರಿಗೆ ಬೇಕಾಗುವ ವ್ಯವಸಾಯ, ಪಶುಪಾಶನೆ, ಗೃಹಕೈಗಾರಿಕೆ, ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ವಿಷಯಗಳನ್ನು ಪ್ರಕಟಿಸಲಾಗುವುದು. ಜೊತೆಗೆ ಆಯಾ ವಾರದ ಸುದ್ದಿ ಪ್ರಕಟವಾಗುವುದು. ಮೇಲಾಗಿ ಕಥೆಗಳ ಪ್ರಕಟಣೆಗೆ ಅವಕಾಶವಿದೆ. ಬೆಳಕು ಭಾಷೆ ಸುಲಭ ಮತ್ತು ಲಲಿತ. ಒಂದು ಕಾಲಕ್ಕೆ ಬೆಳಕು ಭಾಷೆಗೆ ಮತ್ತು ನಿರೂಪಣೆಗೆ ಹೆಸರಾಗಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri



ಗ್ರಾಮೀಣವಷ್ಟೇ ಅಲ್ಲ, ಗಾಂಧಿವಾದದವರೆಗೂ
ವಯಸ್ಕರ ಶಿಕ್ಷಣ ವಿಸ್ತಾರವಾದದ್ದು

Sri Vidyabharathi Book Centre, Sringeri

CC-O. In Public Domain. Digitized by eGangotri

ವಯಸ್ಕರು ತರಗತಿಯಲ್ಲಿ ಗಳಿಸಿದ ಓದು ಬರಹವನ್ನು ಮುಂದುವರಿಸಲು ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳು ನೆರವಾಗುವುವು. ಜೊತೆಗೆ ಹೆಚ್ಚಿನ ಜ್ಞಾನ ಸಂಗ್ರಹಿಸುವುದು ಎರಡನೆಯ ಉದ್ದೇಶ. ವಯಸ್ಕರ ತರಗತಿ ನಡೆಯುವ ಕಾಲದಲ್ಲಿ ವಿದ್ಯಾರ್ಥಿಗಳು ಪಠ್ಯಪುಸ್ತಕದ ಜೊತೆಗೆ ಇತರ ಪೂರಕ ಸಾಹಿತ್ಯವನ್ನು ಓದಬೇಕು. ಆದರಿಂದ ಓದುವ ಕುತೂಹಲ ಪೂರೈಕೆಯಾಗುವುದು. ವಿಷಯದ ವಿಪುಲತೆ ಮತ್ತು ವೈಶಾಲದ ಅರಿವಾಗುವುದು. ಜೊತೆಗೆ ವಿದ್ಯಾರ್ಥಿಗಳಲ್ಲಿ ಸ್ವತಂತ್ರವಾಗಿ ಓದಬಲ್ಲೆವೆಂಬ ಆತ್ಮವಿಶ್ವಾಸ ಮತ್ತು ನಂಬಿಕೆ ಮೂಡುವುದು. ಇದನ್ನು ಮನಗಂಡು 1968ರಲ್ಲಿ ವಾಚನ ಹಾಳೆಗಳನ್ನು ಪ್ರಕಟಿಸಿತು. ಈ ವಾಚನ ಹಾಳೆಗಳಲ್ಲಿ ಎರಡು ಹಂತಗಳಿವೆ. ಮೊದಲನೆಯ ಹಂತ ಕೇಲವ 32 ಮೂಲಾಕ್ಷರಗಳಲ್ಲಿ ರಚಿತವಾದದ್ದು. ಕಾಗುಣಿತ, ಒತ್ತಕ್ಷರ ಮತ್ತು ಉಳಿದ ಅಕ್ಷರಗಳನ್ನು ಕಲಿತ ನಂತರ ಓದುವುದು ಎರಡನೆಯ ಹಂತ. ಇವು ವಿವಿಧ ಗ್ರಾಮೀಣ ವಿಷಯಗಳನ್ನು ಒಳಗೊಂಡಿವೆ. ದಪ್ಪ ಅಕ್ಷರ ಮತ್ತು ವರ್ಣರಂಜಿತ ಚಿತ್ರಗಳಿವೆ. ಅಂತಹ 28 ವಾಚನ ಹಾಳೆಗಳಿವೆ. ಇವೆಲ್ಲವೂ ಸಾಹಿತ್ಯ ರಚನಾಲಯದಲ್ಲಿ ತಯಾರಾದವು.

ಪುಸ್ತಕ ಭಂಡಾರ

ವಿದ್ಯಾಮಂದಿರದ ಪುಸ್ತಕಗಳನ್ನು ಉಪಾಧ್ಯಾಯರ ನೇತೃತ್ವದಲ್ಲಿ ವಯಸ್ಕರ ತರಗತಿ ವಿದ್ಯಾರ್ಥಿಗಳು ಓದಬೇಕೆಂಬ ನಿಯಮವಿದೆ. ಈ ಕಾರ್ಯ ತೃಪ್ತಿಕರವಾಗಿ ನಡೆದಲ್ಲಿ, ನವಸಾಕ್ಷರರಲ್ಲಿ ವಾಚನಾಭಿರುಚಿ ಅಂಕುರಿಸುವುದು.

ಗ್ರಾಮೀಣ ಪ್ರದೇಶಗಳಲ್ಲಿ ನವ ಸಾಕ್ಷರರ ಜೊತೆಗೆ ಪ್ರಾಥ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಿಕ ಶಾಲೆಯಲ್ಲಿ ಓದಿದವರೂ ಇರುವರು. ಶಾಲೆಯನ್ನು ಬಿಟ್ಟವರು ಮತ್ತು ಇತರ ವಿದ್ಯಾವಂತರು ಇರುವರು. ಅಂತಹ ವರಿಗೆ ಸೂಕ್ತ ವಾಚನ ಸೌಕರ್ಯ ಬೇಡವೆ? ಈ ಕೊರತೆಯನ್ನು ತುಂಬುವುದೇ ಪುಸ್ತಕ ಭಂಡಾರ. ಈ ಯೋಜನೆಯು ಪ್ರಕಾರ ಗ್ರಾಮೀಣ ಜನತೆ ಮುಂದೆ ಬಂದು ಧನ ಸಹಾಯ ಮಾಡ ಬೇಕು. ಆಗ ವಯಸ್ಕರ ಶಿಕ್ಷಣ ಸಮಿತಿ ತನ್ನ ಭಾಗದ ಅನು ದಾನ ನೀಡಿ ಪುಸ್ತಕ ಭಂಡಾರ ಒದಗಿಸುವುದು. ಗ್ರಾಮಸ್ಥರು ನೀಡಬೇಕಾದ ವಂತಿಕೆಯ ಪ್ರಮಾಣ ಕಾಲದಿಂದ ಕಾಲಕ್ಕೆ ಬದಲಾಗುತ್ತಿದೆ. ಗ್ರಾಮೀಣ ಪುಸ್ತಕ ಭಂಡಾರ ಪಡೆಯಲು ಗ್ರಾಮ ಪಂಚಾಯತಿ, ಸಹಕಾರ ಸಂಘ ಅಥವಾ ಯಾರಾದರೂ ದಾನಿಗಳು ವಂತಿಗೆ ನೀಡಬಹುದು. ಪುಸ್ತಕ ಭಂಡಾರ ಯಾರೊಬ್ಬರ ಸ್ವತ್ತಲ್ಲ. ಇಡೀ ಗ್ರಾಮಕ್ಕೆ ಸೇರಿದ್ದು. ಭಂಡಾರಕ್ಕೆ ಬೇಕಾದ ಪುಸ್ತಕ, ಪತ್ರಿಕೆ, ಪೆಟ್ಟಿಗೆ ಮತ್ತು ದಿನ ಮತ್ತು ವಾರ ಪತ್ರಿಕೆಯನ್ನು ಸಮಿತಿ ಒದಗಿಸುವುದು. ಪ್ರತಿವರ್ಷವೂ ಗ್ರಾಮ ಪಂಚಾಯತಿ ಪುಸ್ತಕ ಭಂಡಾರ ನಡೆಸಲು ನಿಗದಿಯಾದ ಚಂದಾ ಹಣ ಕೊಡಬೇಕು. ಅದಕ್ಕೆ ಸಮನಾದ ಅನುದಾನ ವನ್ನು 100 ರೂ.ಗಳಿಗೆ ಕಡಿಮೆಯಿಲ್ಲದಂತೆ ಸಮಿತಿ ನೀಡು ವುದು. ಈ ಒಟ್ಟು ಹಣಕ್ಕೆ ಪುಸ್ತಕ ಭಂಡಾರ ಸ್ಥಳೀಯ ಸಮಿತಿ ತನ್ನದೇ ಆದ ಆಯವ್ಯಯ ಪಟ್ಟಿಯನ್ನು ತಯಾರಿಸುವುದು. ಸಮಿತಿ ಕನ್ನಡದಲ್ಲಿ ಅಚ್ಚಾದ ಎಲ್ಲ ಪುಸ್ತಕಗಳನ್ನು ಕೊಂಡು ಇಡಬೇಕೆಂಬ ನೀತಿ ಇದೆ. ಪುಸ್ತಕಗಳ ಆಯ್ಕೆ ಮಾಡಲು ಒಂದು ತಜ್ಞರ ಸಮಿತಿ ಹೆಸರಿಗಿದೆ. ಸಮಿತಿ ತನ್ನಲ್ಲಿ ಇರುವ ಪುಸ್ತಕಗಳ ಪಟ್ಟಿಯನ್ನು ತಯಾರಿಸಿ ಗ್ರಾಮೀಣ ಪುಸ್ತಕ ಭಂಡಾರಗಳಿಗೆ ಹಂಚುವುದು. ಪುಸ್ತಕ ಭಂಡಾರದ ಅಧಿಕಾರಿ ಸ್ಥಳೀಯ ಸಮಿ ತಿಯ ಸದಸ್ಯರ ನೆರವಿನಿಂದ ಪುಸ್ತಕಗಳನ್ನು ಆಯ್ಕೆ ಮಾಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಟ್ಟಿಯನ್ನು ಕೇಂದ್ರ ಕಛೇರಿಗೆ ಕಳುಹಿಸುವನು. ಅನೇಕ ವೇಳೆ ಅಯ್ಕೆ ಮಾಡಿದ ಪುಸ್ತಕಗಳನ್ನು ಸಮಿತಿ ಒದಗಿಸುತ್ತಿಲ್ಲ ಎಂಬ ದೂರಿದೆ. ಪುಸ್ತಕ ಭಂಡಾರದ ಅಧಿಕಾರಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ಅವನು ಕಳುಹಿಸುವ ವರದಿಯ ಮೇಲೆ ಸಂಭಾವನೆ ಕೊಡಲಾಗುವುದು. ರಾಜ್ಯಾದ್ಯಂತ 2704 ಗ್ರಾಮ ಪುಸ್ತಕ ಭಂಡಾರಗಳಿವೆ.

ಕೇಂದ್ರ ಪುಸ್ತಕ ಭಂಡಾರ

ಗ್ರಾಮ ಪುಸ್ತಕ ಭಂಡಾರಗಳಲ್ಲಿ ಎಲ್ಲ ಕನ್ನಡ ಪುಸ್ತಕಗಳನ್ನು ಇಡಲು ಸಾಧ್ಯವಿಲ್ಲ. ಆದರಿಂದ ಅವರು ಅಪೇಕ್ಷಿಸಿದ ಪುಸ್ತಕಗಳನ್ನು ಎರವಲಾಗಿ ಒದಗಿಸಲು 10 ಜಿಲ್ಲಾ ಕೇಂದ್ರಗಳಲ್ಲಿ ಕೇಂದ್ರ ಪುಸ್ತಕ ಭಂಡಾರ ಇದೆ. ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಈ ಸೌಕರ್ಯವಿದೆ. ಗ್ರಾಮ ಪುಸ್ತಕ ಭಂಡಾರಗಳು ವಾರ್ಷಿಕ ಚಂದಾ ಹಣ 2 ರೂ.ಗಳನ್ನು ಕೊಟ್ಟು ಕೇಂದ್ರ ಪುಸ್ತಕ ಭಂಡಾರಕ್ಕೆ ಸದಸ್ಯರಾಗಬೇಕು. ಅಂತಹ ಸದಸ್ಯ ಭಂಡಾರಗಳಿಗೆ ಕೇಂದ್ರ ಪುಸ್ತಕ ಭಂಡಾರದಿಂದ ಪುಸ್ತಕಗಳನ್ನು ಎರವಲಾಗಿ ಒದಗಿಸುವ ವ್ಯವಸ್ಥೆ ಇದೆ. ಈಗ ಬಹಳ ವರ್ಷಗಳಿಂದ ಕೇಂದ್ರ ಪುಸ್ತಕ ಭಂಡಾರದ ಕೆಲಸ ನಿಂತಿದೆ.

ಕ್ಷೇತ್ರೀಯ ಪುಸ್ತಕ ಭಂಡಾರ

ಕೆಲವು ಗ್ರಾಮೀಣ ಪ್ರದೇಶಗಳು ತಮ್ಮದೇ ಆದ ಕೇಂದ್ರ ಪುಸ್ತಕ ಭಂಡಾರಗಳನ್ನು ಹೊಂದಿವೆ. ಅವುಗಳಿಗೆ ಕ್ಷೇತ್ರೀಯ ಪುಸ್ತಕ ಭಂಡಾರಗಳೆಂದು ಹೆಸರು. ಈ ಯೋಜನೆಯ ಪ್ರಕಾರ ಆಯಾ ಕ್ಷೇತ್ರದ ಜನತೆ ಅಥವಾ ಗ್ರಾಮ ಪಂಚಾಯತಿ ಕನಿಷ್ಠ ಒಂದು ಸಾವಿರ ರೂಪಾಯಿ ಚಂದಾ ಹಣ ಕೊಡಬೇಕು. ಜೊತೆಗೆ ಪುಸ್ತಕ ಭಂಡಾರ ಇಡಲು ಒಂದು ಕಟ್ಟಡ ಕೊಡ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಕು. ಮೇಲಾಗಿ ವರ್ಷವೂ ನಿಗದಿಯಾದ ಚಂದಾ ಹಣ ಕೊಡುವುದು ಆಗತ್ಯ. ಸಮಿತಿ ತನ್ನ ಭಾಗದ ಅನುದಾನವನ್ನು ಪುಸ್ತಕ, ಪತ್ರಿಕೆ ಮತ್ತು ಪೀಠೋಪಕರಣಗಳಿಗೆ ವಿನಿಯೋಗಿಸುವುದು. ಪುಸ್ತಕ ಭಂಡಾರದ ಸೇವೆ ಸಲ್ಲಿಸಲು ಒಬ್ಬ ಒಪ್ಪೊತ್ತಿನ ಕೆಲಸಗಾರರನ್ನು ನೇಮಿಸಲಾಗುವುದು. ರಾಜ್ಯಾದ್ಯಂತ 44 ಕ್ಷೇತ್ರೀಯ ಪುಸ್ತಕ ಭಂಡಾರಗಳಿವೆ. ಅವುಗಳ ಪೈಕಿ ಮಾದರಿಯಾದ ಪುಸ್ತಕ ಭಂಡಾರದ ವಿಚಾರ ತಿಳಿಸುವುದು ಸೂಕ್ತ. ಅದೇ ಚಿತ್ರದುರ್ಗ ಜಿಲ್ಲೆ ದಾವಣಗೆರೆ ತಾಲ್ಲೂಕು ನರಗನಹಳ್ಳಿ ಪುಸ್ತಕ ಭಂಡಾರ. ಅದು ತನ್ನ ಸುತ್ತಮುತ್ತಲಿನ ಗ್ರಾಮಗಳಿಗೆ ಸಂಚಾರಿ ಪುಸ್ತಕ ಭಂಡಾರದ ಸೇವೆ ಸಲ್ಲಿಸುವುದು. ಆ ಸದಸ್ಯ ಭಂಡಾರಗಳು ಕನಿಷ್ಠ ತಲಾ 10 ರೂ.ಗಳಿಗೆ ಕಡಿಮೆ ಇಲ್ಲದಂತೆ ವಾರ್ಷಿಕ ಚಂದಾ ನೀಡುವುವು. ಜೊತೆಗೆ ನರಗನಹಳ್ಳಿ ಗ್ರಾಮ ಪಂಚಾಯತಿ ಪ್ರತಿವರ್ಷ 100 ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಚಂದಾ ಹಣ ನೀಡುವುದು. ನರಗನಹಳ್ಳಿ ಗ್ರಾಮದವರು ಪುಸ್ತಕ ಭಂಡಾರದ ಅಭಿವೃದ್ಧಿಗೆ ಎಂಟು ಎಕರೆ ಜಮೀನನ್ನು ಬಿಟ್ಟು ಕೊಟ್ಟಿರುವರು. ಆ ಜಮೀನಿನಲ್ಲಿರುವ ಹುಣಸೆಮರಗಳ ಫಸಲನ್ನು ಸ್ಥಳೀಯ ಸಮಿತಿ ಹರಾಜು ಮಾಡಿ ಪುಸ್ತಕ ಭಂಡಾರದ ಲಿಕ್ಕಕ್ಕೆ ಹಣವನ್ನು ಜಮಾ ಮಾಡುವುದು. ಜೊತೆಗೆ ಜಮೀನಿನ ಆದಾಯವೂ ಪುಸ್ತಕ ಭಂಡಾರದ ವರಮಾನ.

ಮೈಸೂರು ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಆಗತ ಗೌಡನ ಹಳ್ಳಿಯಲ್ಲಿ ಒಂದು ಪುಸ್ತಕ ಭಂಡಾರವಿದೆ. ಈ ಭಂಡಾರಕ್ಕೆ ಅದೇ ಗ್ರಾಮದ ರಾಮಪ್ಪನವರು ಒಂದು ಎಕರೆ ಜಮೀನನ್ನು ದಾನ ಮಾಡಿರುವರು. ದೇವಸ್ಥಾನ, ಮಠ ಮತ್ತು ಛತ್ರಗಳಿಗೆ ಜಮೀನನ್ನು ದತ್ತಿ ಬಿಡುವುದು, ನಮ್ಮಲ್ಲಿರುವ ಸಂಪುದಾಯ. ಆದರೆ ಗ್ರಾಮೀಣ ಗ್ರಂಥಾಲಯಗಳ ಏಳಿಗೆಗೆ ಜಮೀ

Sri Vidyabharathi Book Centre, Sringeri

CC-O. In Public Domain. Digitized by eGangotri

ನನ್ನು ದಾನ ಮಾಡುವುದು ಒಂದು ಹೆಚ್ಚಿನ ಸಂಗತಿ ಅಲ್ಲವೆ ? ಪುಸ್ತಕ ಭಂಡಾರಗಳಿಗೆ ಪ್ರೋತ್ಸಾಹ ನೀಡಲು ಅನೇಕ ಮಹನೀಯರು ಪಾರಿತೋಷಕಗಳನ್ನು ನೀಡಿರುವರು. ಅವುಗಳಲ್ಲಿ ಅನೇಕವು ಇಂದು ಜಿಲ್ಲಾ ಕಛೇರಿಗಳಲ್ಲಿ ಅಲಂಕಾರ ವಸ್ತುಗಳಾಗಿವೆ. ಪ್ರಾಯಶಃ ಇವುಗಳನ್ನು ಪ್ರತಿ ಸಾಲಿನಲ್ಲಿ ವಿತರಣೆ ಮಾಡುವ ಕೆಲಸ ನಡೆದಿಲ್ಲ. ತಲತಲಾಂತರಗಳಿಂದ ನಮ್ಮ ಗ್ರಾಮೀಣರಿಗೆ ಅಕ್ಷರ ವಿದ್ಯೆಯ ಗಂಧವಿಲ್ಲ. ಹೀಗಿದ್ದರೂ ಅವರು ಮೇಲ್ಕಂಡಂತೆ ಪ್ರೋತ್ಸಾಹ ನೀಡುತ್ತಿರುವುದು ಮೆಚ್ಚುವ ಸಂಗತಿ. ಇವು ಗ್ರಾಮೀಣ ಪುಸ್ತಕ ಭಂಡಾರಗಳ ಭವ್ಯ ಭವಿಷ್ಯದ ಪ್ರತೀಕ.

ಗ್ರಾಮೀಣ ಪುಸ್ತಕ ಭಂಡಾರಗಳ ಅಭಿವೃದ್ಧಿಗೆ ಸಲಹೆಗಳು

1) ಗ್ರಾಮೀಣ ಪುಸ್ತಕ ಭಂಡಾರಗಳಿಗೆ ಸಂಬಂಧಪಟ್ಟಂತೆ ಸ್ಥಳೀಯ ಸಲಹಾ ಸಮಿತಿಗಳಿವೆ. ಅವುಗಳನ್ನು ಆಗಿಂದಾಗ್ಗೆ ಪುನರ್ರಚಿಸಬೇಕು; ಆ ಸಮಿತಿಗಳಿಗೆ ಹೊಸ ರಕ್ತ ತುಂಬಬೇಕು. ಸ್ಥಳೀಯ ಸಮಿತಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಸಮಿತಿಯ ಕಾರ್ಯಕರ್ತರು ನೋಡಿಕೊಳ್ಳಬೇಕು. 2) ಗ್ರಾಮೀಣ ಪುಸ್ತಕ ಭಂಡಾರಗಳು ಬೇಡುವ ಪುಸ್ತಕಗಳನ್ನು ಸಮಿತಿ ಒದಗಿಸುತ್ತಿಲ್ಲ ಎಂಬ ದೂರಿದೆ. ಅದರ ಕಡೆಗೆ ಗಮನ ಹರಿಸತಕ್ಕದ್ದು. 3) ಗ್ರಾಮೀಣ ಓದುಗರ ಆವಶ್ಯಕತೆಗಳಿಗೆ ಅನುಗುಣವಾದ ಪುಸ್ತಕಗಳು ಪ್ರಕಟವಾಗುತ್ತಿಲ್ಲ. ಭಾರತ ಸರಕಾರದಿಂದ 1956ರಲ್ಲಿ ರಚಿಸಿದ ಸಿನಾಖ ಸಮಿತಿಯ ವರದಿಯೂ ಅದನ್ನೇ ಉಲ್ಲೇಖಿಸಿದೆ. ಅಲ್ಲಿಂದ ಈಚೆಗೆ ಹೆಚ್ಚಾಗಿ ಸಮಿತಿ ಪುಸ್ತಕ ಭಂಡಾರ ಮಾಲೆಯಲ್ಲಿ ಕೆಲವು ಪುಸ್ತಕಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಟಿಸಿದೆ. ಆದರೆ ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಪ್ರಯತ್ನ ಆಗತ್ಯ. 4) ಪುಸ್ತಕ ಭಂಡಾರಗಳು ಸಮರ್ಪಕವಾಗಿ ಸೇವೆ ಸಲ್ಲಿಸಲು ಪುಸ್ತಕ ಭಂಡಾರದ ಅಧಿಕಾರಿಗಳ ತರಬೇತು ಆಗತ್ಯ. 5) ಗ್ರಾಮ ಪುಸ್ತಕ ಭಂಡಾರಗಳನ್ನು ಅವುಗಳ ಗಾತ್ರ ಮತ್ತು ಸೇವೆಗೆ ಅನುಗುಣವಾಗಿ ವರ್ಗೀಕರಿಸಬೇಕು. ಅಂತೆಯೇ ಪುಸ್ತಕ ಭಂಡಾರದ ಅಧಿಕಾರಿಗಳ ಸಂಭಾವನೆ ಹೆಚ್ಚಬೇಕು. 6) ಪುಸ್ತಕ ಭಂಡಾರದ ಮೇಲ್ವಿಚಾರಣೆ ಪರಿಣಾಮಕಾರಿಯಾಗಿರತಕ್ಕದ್ದು. 7) ಸಮಿತಿ ಪುಸ್ತಕ ಪ್ರಪಂಚ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದೆ. ಅದರಲ್ಲಿ ಪುಸ್ತಕ ಭಂಡಾರಗಳ ಅಭಿವೃದ್ಧಿಗೆ ಸಂಬಂಧಪಟ್ಟ ಲೇಖನಗಳನ್ನು ಪ್ರಕಟಿಸಬಹುದು. ಜೊತೆಗೆ ಮಾದರಿಯಾದ ಪುಸ್ತಕ ಭಂಡಾರಗಳ ಪ್ರಗತಿಯನ್ನು ಅಚ್ಚುಮಾಡಬಹುದು. 8) ಪುಸ್ತಕ ಭಂಡಾರಗಳ ವಾರ್ಷಿಕೋತ್ಸವಗಳನ್ನು ನೆರವೇರಿಸಬಹುದು. ಆ ಸಂದರ್ಭದಲ್ಲಿ ಪ್ರತಿ ಮನೆಗೂ ಸಹ ಭೇಟಿ ಕೊಟ್ಟು ಪುಸ್ತಕಗಳನ್ನು ಸಂಗ್ರಹಿಸಬಹುದು. ಅವುಗಳಲ್ಲಿ ಯೋಗ್ಯವಾದುವುಗಳನ್ನು ಪುಸ್ತಕ ಭಂಡಾರಕ್ಕೆ ಸೇರಿಸಬೇಕು. ಆ ಸಾಲಿನಲ್ಲಿ ಹೆಚ್ಚು ಪುಸ್ತಕ ಓದಿದವರನ್ನು ಮತ್ತು ಪುಸ್ತಕ ಭಂಡಾರದ ಅಧಿಕಾರಿಯನ್ನು ಪುರಸ್ಕರಿಸುವುದು ಆಗತ್ಯ. 9) ಸಂಜೆಯ ವೇಳೆ ಪುಸ್ತಕ ಭಂಡಾರದ ಆಶ್ರಯದಲ್ಲಿ ಪುಸ್ತಕ ಮತ್ತು ದೈನಂದಿನ ಪತ್ರಿಕಾ ವಾಚನವನ್ನು ಕೈಕೊಳ್ಳಬಹುದು. ಅದನ್ನು ಕೇಳಲು ನಿರಕ್ಷರರು ಮತ್ತು ವಿದ್ಯಾವಂತರು ಸೇರಬಹುದು. ಅಪ್ರತ್ಯಕ್ಷವಾಗಿ ನಿರಕ್ಷರರು ಪ್ರೋತ್ಸಾಹಿತರಾಗಿ ಓದು ಬರಹ ಕಲಿಯಲು ರಾತ್ರಿ ಶಾಲೆಗಳಿಗೆ ಸೇರಬಹುದು. ಇಂತಹ ಕಾರ್ಯಕ್ರಮ ಸ್ವಾತಂತ್ರ್ಯಕ್ಕೆ ಮುನ್ನ ಆಂಧ್ರಪ್ರದೇಶದಲ್ಲಿ ಒಳ್ಳೆಯ ಪರಿಣಾಮವನ್ನುಂಟುಮಾಡಿದೆ. ರಷ್ಯದಲ್ಲೂ ಸಹ ಈ ಪ್ರಯೋಗ ಯಶಸ್ವಿಯಾಗಿದೆ. 10) ಪುಸ್ತಕಭಂಡಾರದ ಸದಸ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ರನ್ನು ಹೆಚ್ಚಿಸಲು ಪ್ರತಿ ಮನೆಗೂ ಭಂಡಾರದ ಅಧಿಕಾರಿಗಳು ಸಮಿತಿಯ ಸದಸ್ಯರೊಡನೆ ಭೇಟಿ ಮಾಡಿ ಭಾವಿ ಓದುಗರ ವಿವರಗಳನ್ನು ಸಂಗ್ರಹಿಸುವುದು ಒಳ್ಳೆಯದು. ವಿವರಗಳು ಹೀಗಿರಬಹುದು : 1. ಸದಸ್ಯನ ಹೆಸರು 2. ವಯಸ್ಸು 3. ವಿದ್ಯಾರ್ಹತೆ 4. ಕಸುಬು 5. ಪುಸ್ತಕ ಭಂಡಾರದ ಉಪಯೋಗ ಪಡೆಯುತ್ತಿರುವನೇ 6. ಇಲ್ಲದಿದ್ದರೆ ಕಾರಣ 7. ಅವನು/ಳು ಓದಲು ಇಚ್ಛಿಸುವ ವಿಷಯ. ಹೀಗೆ ಪ್ರತಿಯೊಬ್ಬರ ಮಾಹಿತಿಯನ್ನು ಒಂದೊಂದು ಕಾರ್ಡಿನಲ್ಲಿ ಸಂಗ್ರಹಿಸಬೇಕು. ಅವರ ಪೈಕಿ ಭಂಡಾರದ ಸದಸ್ಯರನ್ನು ನೋಡಿ, ಗುರುತುಹಾಕಿಕೊಳ್ಳಬೇಕು. 11) ಭಂಡಾರಕ್ಕೆ ಬರುವ ಪತ್ರಿಕೆಗಳನ್ನು ಸಂಗ್ರಹಿಸಿ ಅವುಗಳನ್ನು ಮಾರಿ ಬಂದ ಹಣದಿಂದ ಭಂಡಾರಕ್ಕೆ ನಾಮಫಲಕ, ಸೀಲು ಮತ್ತು ಪ್ಯಾಡುಗಳನ್ನು ಮಾಡಿಸಬಹುದು. 12) ಭಂಡಾರದ ಆಶ್ರಯದಲ್ಲಿ ರಾಷ್ಟ್ರೀಯ ಹಬ್ಬ ಮತ್ತು ರಾಷ್ಟ್ರಮುಖಂಡರ ಜಯಂತಿಗಳನ್ನು ನೆರವೇರಿಸಬಹುದು ಮತ್ತು ಆ ಸಂದರ್ಭಕ್ಕೆ ಸೂಕ್ತವಾದ ಪುಸ್ತಕಗಳ ಪ್ರದರ್ಶನ ಏರ್ಪಡಿಸಬಹುದು.

ವಿದ್ಯಾಪೀಠಗಳು

ಇವು ಗ್ರಾಮದ ಯುವಕರಿಗೆ ಮೀಸಲಾದ ಸಂಸ್ಥೆಗಳು. ಅವುಗಳನ್ನು ಡೆನ್ಮಾರ್ಕಿನ ಜನತಾ ಶಾಲೆಗಳ ಮಾದರಿಯಲ್ಲಿ ಭಾರತೀಯ ಸಂಸ್ಕೃತಿಯ ಸನ್ನಿವೇಶಕ್ಕೆ ತಕ್ಕಂತೆ ರೂಪಿಸಿದೆ. ಗ್ರಾಮ ಜೀವನ ಚೇತನಗೊಳ್ಳಬೇಕು. ಉತ್ತಮ ಶಿಕ್ಷಣ ಪಡೆದ ಯುವಕ ಮಾತ್ರ ಗ್ರಾಮೀಣರ ಅಭಿವೃದ್ಧಿಗೆ ಶ್ರಮಿಸಬಲ್ಲ. ಅಂತಹ ಗ್ರಾಮೀಣ ಯುವಕರಿಗೆ ಜೀವನ ಶಿಕ್ಷಣ ನೀಡುವುದು ವಿದ್ಯಾಪೀಠಗಳ ಗುರಿ.

ವಿದ್ಯಾಪೀಠಗಳು ಹಿಂದಿನ ಗುರುಕುಲ ಮಾದರಿಯಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ರೂಪುಗೊಂಡಿದೆ. ಆದೊಂದು ವಸತಿ ಶಾಲೆ. ವಿದ್ಯಾರ್ಥಿಗಳೆಲ್ಲರೂ ಒಂದೇ ಕಡೆ ವಾಸಿಸುವರು. ಒಂದೇ ಕಡೆ ಕುಳಿತು ಊಟ ಮಾಡುವರು. ಒಟ್ಟಾಗಿ ಕುಳಿತು ಚಿಂತನೆ ಮಾಡುವರು. ಅಲ್ಲಿ ಅಧ್ಯಾಪಕವರ್ಗದವರಿಗೂ ವಿದ್ಯಾರ್ಥಿಗಳಿಗೂ ನಿಕಟ ಸಂಪರ್ಕವಿದೆ. ವಿದ್ಯಾರ್ಥಿಗಳ ಜೀವನ ಸರಳ ಮತ್ತು ನಿರಾಡಂಬರ ಜೀವನ.

ಅಲ್ಲಿ ಶ್ರಮ ಜೀವನದ ಹಿನ್ನೆಲೆ ಇದೆ. ಶಿಸ್ತಿನ ದಿನಚರಿ ಉಂಟು. ಪ್ರತಿನಿತ್ಯದ ಕೆಲಸ ಕಾರ್ಯಗಳಲ್ಲಿ ಶಿಕ್ಷಣಾರ್ಥಿಗಳ ಪೈಕಿ ಒಬ್ಬರು ಮುಂದಾಳತ್ವವನ್ನು ವಹಿಸುವರು. ಆದರಿಂದ ಆವರಲ್ಲಿ ಮುಂದಾಳುತನದ ಲಕ್ಷಣ ಮತ್ತು ಸಾಮರ್ಥ್ಯ ಬೆಳೆಯುವುದು. ಅಲ್ಲಿ ನಡೆಸುವ ಸಂಘ ಜೀವನ ವ್ಯಕ್ತಿಯ ಬೆಳವಣಿಗೆಗೆ ಪೋಷಕ.

ವಿದ್ಯಾರ್ಥಿಗಳು ದಿನಕ್ಕೆ ನಾಲ್ಕು ಘಂಟೆಗಳ ಕಾಲ ಅಧ್ಯಯನ ಮಾಡಲು ಅವಕಾಶ ಇದೆ. ಪ್ರಚಲಿತ ವಿಷಯಗಳನ್ನು ಆಚಾರ್ಯರ ಮುಖೇಣ ಹಾಗೂ ಸಾಮೂಹಿಕ ಮಾಧ್ಯಮಗಳ ಮೂಲಕ ತಿಳಿಯುವುದು. ವಿಚಾರ ವಿನಿಮಯಕ್ಕೆ ಅವಕಾಶವಿದೆ. ರಚನಾತ್ಮಕ ಸಲಹೆಗೆ ಮಾನ್ಯತೆ ಉಂಟು. ವೈಚಾರಿಕ ಪ್ರಜ್ಞೆ ಹಾಗೂ ವಿಮರ್ಶಾತ್ಮಕ ದೃಷ್ಟಿ ಬೆಳೆಸಲು ಪರಿಸರ ಹದವಾಗಿದೆ. ಅಲ್ಲಿ ಪರೀಕ್ಷೆಗಳ ಕಾಟವಿಲ್ಲ. ಜ್ಞಾನಾರ್ಜನೆಗೆ ಒಳ್ಳೆಯ ಪುಸ್ತಕ ಭಂಡಾರವಿದೆ. ಆದರೆ ಅದನ್ನು ಎಷ್ಟರಮಟ್ಟಿಗೆ ಬಳಸುತ್ತಿದ್ದಾರೆ ಎಂಬುದು ಪರಿಶೀಲಿಸಬೇಕಾದ ಅಂಶ. ದೇಶ ನೋಡು, ಕೋಶ ಓದು ಎಂಬಂತೆ ಪುಸ್ತಕಗಳ ಮೂಲಕ ಜ್ಞಾನ ಸಂಗ್ರಹಕ್ಕೆ ಮತ್ತು ಪ್ರವಚನದ ಮೂಲಕ ಬೆಳಕನ್ನು ಕಾಣಲಿಕ್ಕೆ ಅವಕಾಶವಿದೆ. ವಾಚನಾಲಯ ಮತ್ತು ರೇಡಿಯೊ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ನೆರವಾಗಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿಸ್ತು ಸಂಯಮ ಮುಂದಾಳುತನಕ್ಕೆ ಮೂಲ ಶಿಕ್ಷಣ
ಇದಕ್ಕಾಗಿ ರೂಪಗೊಂಡಿರುವ ವಯಸ್ಕರ ಶಿಕ್ಷಣ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ಯಾಪೀಠದ ವೈಶಿಷ್ಟ್ಯಗಳು

ವಿದ್ಯಾಪೀಠಗಳಲ್ಲಿ ಜಾತಿಮತಗಳ ಭೇದವಿಲ್ಲ. ಎಲ್ಲರಿಗೂ ಒಂದೇ ಕಡೆ ವಾಸ ಮತ್ತು ಒಟ್ಟಾಗಿ ಕುಳಿತು ಊಟ ಮಾಡುವ ಅಭ್ಯಾಸ. ವಿದ್ಯಾಪೀಠದ ಆವರಣದ ಸ್ವಚ್ಛತೆ ವಿದ್ಯಾರ್ಥಿಗಳಿಗೆ ಸೇರಿದ್ದು. ಅಡಿಗೆ ಮನೆಯ ವಹಿವಾಟು ಅವರಿಗೆ ಸೇರಿದ ಜವಾಬ್ದಾರಿ. ಒಮ್ಮೆ ಅದು ಒಬ್ಬ ಹರಿಜನ ವಿದ್ಯಾರ್ಥಿಯ ಪಾಲಿಗೆ ಬಂತು. ವಿದ್ಯಾರ್ಥಿಗಳು ಆತನಿಂದ ಊಟ ಬಡಿಸಿಕೊಳ್ಳಲು ಇಷ್ಟ ಪಡಲಿಲ್ಲ. ಈ ವಿಷಯದಲ್ಲಿ ಆಚಾರ್ಯರು ಪ್ರವೇಶಿಸಲಿಲ್ಲ. ಕಾರಣ ಆಗ ವಾತಾವರಣ ಹದವಾಗಿರಲಿಲ್ಲ. ಆ ತಂಡದ ತರಬೇತು ಮುಗಿಯುವುದರೊಳಗೆ ವಿದ್ಯಾರ್ಥಿಗಳು ತಮ್ಮ ತಪ್ಪಿಗೆ ಮರುಕ ಪಟ್ಟರು. ಆ ವೇಳೆಗೆ ಅವರ ಹೃದಯ ಪರಿವರ್ತನೆ ಆಗಿತ್ತು. ಎಲ್ಲರೂ ಆ ಹರಿಜನ ವಿದ್ಯಾರ್ಥಿಯಿಂದಲೇ ಬಡಿಸಿಕೊಂಡು ಊಟ ಮಾಡಿದರು. ಇದಕ್ಕಿಂತ ಹೆಚ್ಚಿನ ಶಿಕ್ಷಣ ಬೇಕೆ? ಈ ತೆರನಾದ ಶಿಕ್ಷಣ ಶಾಲೆಗಳಲ್ಲಿ ದೊರೆಯುವುದೆ?

ವಿದ್ಯಾಪೀಠದಲ್ಲಿ ಸಂಘ ಜೀವನ ಇದೆ. ಆದರಿಂದ ವಿದ್ಯಾರ್ಥಿಗಳು ತಮ್ಮ ಓರೆಕೋರೆಗಳನ್ನು ತಿದ್ದಿಕೊಂಡು ಸುಧಾರಿಸಲು ಅವಕಾಶವಿದೆ. ಗ್ರಾಮದ ಯುವಕನೊಬ್ಬ. ಆತ ತನ್ನ ತಂದೆಗೆ ಬಲಮಗ. ಮನೆಯಲ್ಲಿ ಆತ ತಂದೆತಾಯಿಗೆ ವಿಧೇಯನಾಗಿರಲಿಲ್ಲ. ವಯಸ್ಸಿಗೆ ಬಂದಿದ್ದರೂ ಮನೆಯ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರಲಿಲ್ಲ. ಒಂದು ರೀತಿಯಲ್ಲಿ ದುಷ್ಟ ಸಹವಾಸಕ್ಕೆ ಬಿದ್ದಿದ್ದ ಎಂದು ಹೇಳಬಹುದು. ಆವನನ್ನು ಸುಧಾರಿಸುವುದು ತಂದೆಗೆ ಭಾರಿ ತಲೆನೋವಾಯಿತು. ಕಡೆಗೆ ಆತನನ್ನು ನಂಜನಗೂಡು ವಿದ್ಯಾಪೀಠಕ್ಕೆ ಸೇರಿಸಿದರು. ಆ ವಿದ್ಯಾರ್ಥಿ ಇತರ ವಿದ್ಯಾರ್ಥಿಗಳೊಡನೆ ಪ್ರಾರಂಭದಲ್ಲಿ ಹೊಂದಿಕೊಳ್ಳಲಿಲ್ಲ. ಅವರೊಡನೆ ಜಗಳ ಆಡುತ್ತಿದ್ದ. ಒಂದು ದಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಬ್ಬ ವಿದ್ಯಾರ್ಥಿಗೆ ಚೆನ್ನಾಗಿ ಹೊಡೆದ. ಅವನ ಮೂಗಿನಿಂದ ರಕ್ತ ಸುರಿಯಲು ಪ್ರಾರಂಭವಾಯಿತು. ಇಬ್ಬರೂ ಆಚಾರ್ಯರ ಹತ್ತಿರ ಹೋದರು. ಆಚಾರ್ಯರಿಗೆ ಎಲ್ಲ ಸಂಗತಿ ತಿಳಿಯಿತು. ಆಚಾರ್ಯರು ತಪ್ಪು ಮಾಡಿದ ವಿದ್ಯಾರ್ಥಿಯನ್ನು ಕ್ಷಮಾಪಣೆ ಕೇಳುವಂತೆ ಹೇಳಿದರು. ಆದರೆ ಆಚಾರ್ಯರ ಮಾತಿಗೆ ಅವನು ಬೆಲೆ ಕೊಡಲಿಲ್ಲ. ಕಡೆಗೆ ಆಚಾರ್ಯರು ಬೇಜಾರಾಗಿ ಆತನನ್ನು ವಿದ್ಯಾಪೀಠದಿಂದ ಹೊರಕ್ಕೆ ಕಳುಹಿಸಿದರು. ಅವನು ಗಂಟು ಮೂಟೆ ಕಟ್ಟಿ ಹೊರಟ. ಬಸ್ಸಿಗಾಗಿ ಸುಮಾರು ಎರಡು ಘಂಟೆ ಕಾಲ ಕಾದ. ಬಸ್ಸು ಸಿಗಲಿಲ್ಲ. ಆ ವೇಳೆಗೆ ಅವನಿಗೆ ಮನಸ್ಸು ಬದಲಾಯಿಸಿರಬೇಕು. ವಾಪಸ್ಸು ಬಂದು ಆಚಾರ್ಯರ ಕ್ಷಮೆ ಬೇಡಿದನು. 'ನನ್ನದು ತಪ್ಪು ದಯವಿಟ್ಟು ಕ್ಷಮಿಸಿ. ವಿದ್ಯಾಪೀಠಕ್ಕೆ ವಾಪಸ್ಸು ಸೇರಿಸಿಕೊಳ್ಳಿ' ಎಂದು ಗಳಗಳನೆ ಅಳಲು ಪ್ರಾರಂಭಿಸಿದನು. ಎಂತಹ ಮಾನಸಿಕ ಪರಿವರ್ತನೆ ಅದು? ಮುಂದೆ ಅವನು ವಿಧೇಯನಾಗಿದ್ದ. ವಿದ್ಯಾಪೀಠದ ತರಬೇತಿ ನಂತರ ಮನೆಯ ಜವಾಬ್ದಾರಿಗಳನ್ನು ಆತ ಚೆನ್ನಾಗಿ ನಿರ್ವಹಿಸುತ್ತಿದ್ದನೆಂದು ತಿಳಿಯಿತು.

ವಿದ್ಯಾಪೀಠದಲ್ಲಿ ಆಚಾರ್ಯರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಮಧ್ಯೆ ಅಂತಸ್ತಿನ ಅಂತರವಿರಲಿಲ್ಲ. ಒಂದು ಬಾರಿ ನಂಜನಗೂಡು ವಿದ್ಯಾಪೀಠದಲ್ಲಿ ವಿದ್ಯಾರ್ಥಿಗಳು ಕೋಲಾಟ ಅಭ್ಯಾಸ ಮಾಡಬೇಕಿತ್ತು. ವಿದ್ಯಾರ್ಥಿಗಳು ಏಳು ಮಂದಿ ಮಾತ್ರ ಇದ್ದರು. ಕೋಲಾಟ ಆಡಲು ಇನ್ನೊಬ್ಬರು ಬೇಕಿತ್ತು. ಆಗ ಆಚಾರ್ಯರೇ ವಿದ್ಯಾರ್ಥಿಗಳೊಡನೆ ಕೋಲಾಟಕ್ಕೆ ಸೇರಿದರು.

ಅಲ್ಪಾವಧಿ ಶಿಬಿರಗಳು

ಎಲ್ಲರಿಗೂ ವಿದ್ಯಾಪೀಠದಲ್ಲಿ ಐದು ತಿಂಗಳ ತರಬೇತು

Sri Vidyabharati Book Centre, Shingeri

CC-O. In Public Domain. Digitized by eGangotri



ಓದೋಣ ಬರೆಯೋಣ ವಿದ್ಯವ ಕಲಿಯೋಣ
ಕೋಲು ಕೋಲಣ್ಣ ಕೋಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಗತ್ಯವಿಲ್ಲ. ಪ್ರಾಯಶಃ ಅಷ್ಟು ದೀರ್ಘಕಾಲ ಇರಲೂ ಸಾಧ್ಯವಿಲ್ಲ. ಗ್ರಾಮೀಣರ ಸಮಸ್ಯೆಗಳು ಕಾಲದಿಂದ ಕಾಲಕ್ಕೆ ವ್ಯತ್ಯಾಸ ಆಗುವುವು. ಆದ್ದರಿಂದ ಆವರ ಪ್ರಸಕ್ತ ಸಮಸ್ಯೆಗಳನ್ನು ಪರಿಹರಿಸಲು ಅಲ್ಪಾವಧಿ ಶಿಬಿರಗಳು ಸಾಕು. ಡೆನ್ಮಾರ್ಕಿನ ಜನತಾ ಶಾಲೆಗಳಲ್ಲಿ ಈ ತೆರನಾದ ಶಿಬಿರಗಳು ಜನಪ್ರಿಯವಾಗಿದೆ. ಅನೇಕರು ಸಂಸಾರ ಸಮೇತ ಜನತಾ ಶಾಲೆಗಳಿಗೆ ಬಂದು ಅಲ್ಪಾವಧಿ ಶಿಬಿರಗಳಲ್ಲಿ ಭಾಗವಹಿಸುವರು. ಜೊತೆಗೆ ಶಿಬಿರದಲ್ಲಿ ತಮ್ಮ ಖರ್ಚನ್ನು ಶಿಕ್ಷಣಾರ್ಥಿಗಳೇ ವಹಿಸಿಕೊಳ್ಳುವರು.

ಅಲ್ಪಾವಧಿ ಶಿಬಿರಗಳು ಮೂರರಿಂದ ಏಳು ದಿವಸಗಳ ಕಾಲ ನಡೆಯುವುದು. ಇತ್ತೀಚೆಗೆ ನೀರಾವರಿಗೆ ಪಂಪು ಸೆಟ್ಟುಗಳನ್ನು ರೈತರು ಹೆಚ್ಚಾಗಿ ಬಳಸುತ್ತಿರುವರು. ಕೋಳಿ ಸಾಕಣೆ ಮತ್ತು ಹೈನುಗಾರಿಕೆ ಹೆಚ್ಚು ಪ್ರಿಯವಾದ ಮತ್ತು ಲಾಭಕರವಾದ ಗೃಹಕೈಗಾರಿಕೆಗಳಾಗಿವೆ; ಆದ್ದರಿಂದ ಕಾಲೋಚಿತವಾಗಿ ಹೆಚ್ಚು ಪ್ರಿಯವಾದ ಮತ್ತು ಲಾಭಕರವಾದ ಪಂಪುಸೆಟ್ಟಿನ ಸಣ್ಣಪುಟ್ಟ ರಿಪೇರಿ, ಕೋಳಿ ಸಾಕಣೆ, ಪಶುಪಾಲನೆ, ಬೈಸಿಕಲ್ ರಿಪೇರಿ, ಜೀತವಿಮೋಚನೆ, 20 ಅಂಶಗಳ ಕಾರ್ಯಕ್ರಮ ಮುಂತಾದ ವಿಷಯಗಳ ಮೇಲೆ ಅಲ್ಪಾವಧಿ ಶಿಬಿರಗಳನ್ನು ನಡೆಸಬಹುದು.

ಗ್ರಾಮ ಸೇವಾ ಶಿಬಿರಗಳು

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಮೂಲ ಸ್ಥಾಪಕರು ವಿದ್ಯಾರ್ಥಿವೃಂದ ತಾನೆ? ವಿದ್ಯಾರ್ಥಿಗಳಿಗೆ ಗ್ರಾಮೀಣರ ಕಷ್ಟಸುಖಗಳ ಅರಿವಾಗಬೇಕು. ಜೊತೆಗೆ ಅವರ ಕಷ್ಟಸುಖದಲ್ಲಿ ಭಾಗಿಯಾಗಬೇಕು. ಮೇಲಾಗಿ ಗ್ರಾಮಗಳ ಅಭಿವೃದ್ಧಿಗೆ ತಮ್ಮ ಪಾಲಿನ ಕಾಣಿಕೆ ಸಲ್ಲಿಸುವುದು ಅಗತ್ಯ. ಬೇಸಿಗೆ ರಜ ವಿದ್ಯಾರ್ಥಿಗಳಿಗೆ ಬಿಡುವಿನ ಕಾಲ. ಗ್ರಾಮಸ್ಥರ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೇವೆ ಸಲ್ಲಿಸಲು ಅನುಕೂಲವಾಗುವಂತೆ ಸಮಿತಿ 1949ರ ಬೇಸಿಗೆಯಲ್ಲಿ ಗ್ರಾಮ ಸೇವಾ ಶಿಬಿರಗಳ ಯೋಜನೆಯನ್ನು ಕೈಕೊಂಡಿತು. ಪ್ರತಿ ವರ್ಷ ಶಿಬಿರದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿತು. 1949ರಿಂದ 1953ರವರೆಗಿನ ಅವಧಿಯಲ್ಲಿ 106 ಶಿಬಿರಗಳು ನಡೆದವು. ಅವುಗಳಲ್ಲಿ 1871 ಪ್ರೌಢಶಾಲಾ ವಿದ್ಯಾರ್ಥಿಗಳು ಭಾಗವಹಿಸಿದರು.

ಯೋಜನೆಯ ಪ್ರಕಾರ ಪ್ರತಿಯೊಂದು ಶಿಬಿರದಲ್ಲಿ 15-20 ಮಂದಿ ಪ್ರೌಢಶಾಲಾ ವಿದ್ಯಾರ್ಥಿಗಳಿದ್ದರು. ಶಿಬಿರದ ಮುಂದಾಳತ್ವವನ್ನು ಆಯಾ ಪ್ರೌಢಶಾಲೆಯ ಅಧ್ಯಾಪಕರು ವಹಿಸುತ್ತಿದ್ದರು. ಶಿಬಿರದ ಅವಧಿ ಒಂದು ತಿಂಗಳು. ಸರಾಸರಿ ಒಬ್ಬ ವಿದ್ಯಾರ್ಥಿಗೆ ಊಟ ವಸತಿಗೆ ತಿಂಗಳಿಗೆ ಒದಗಿಸಿದ್ದ ಹಣ ತಲಾ 30 ರೂಪಾಯಿ. ಹಳ್ಳಿಗರು ಅನೇಕ ಗ್ರಾಮಗಳಲ್ಲಿ ಶಿಬಿರಕ್ಕೆ ದವಸ ಧಾನ್ಯಗಳನ್ನು ಒದಗಿಸುತ್ತಿದ್ದರು. ಗ್ರಾಮ ಮುಖಂಡರು ಮತ್ತು ಇತರರು ವಿದ್ಯಾರ್ಥಿಗಳೊಡನೆ ಬೆರೆತು ಗ್ರಾಮದ ಕೆಲಸದಲ್ಲಿ ನೆರವಾಗುತ್ತಿದ್ದರು. ವಿದ್ಯಾರ್ಥಿಗಳ ಸೇವೆಯಿಂದ ಚೇತನಗೊಂಡ ಗ್ರಾಮಸ್ಥರು ಅನೇಕ ಹಳ್ಳಿಗಳಲ್ಲಿ ಅತ್ಯದ್ಭುತ ಮತ್ತು ಆಶ್ಚರ್ಯಕರವಾದ ಕಾರ್ಯ ನಡೆಸಿರುವರು. ಕೆರೆಗಳ ಹೂಳು ತೆಗೆದು ಕೆರೆಗಳ ಜೀರ್ಣೋದ್ಧಾರ ಮಾಡಿದ್ದಾರೆ. ಹೊಸ ಬಾವಿಗಳನ್ನು ತೋಡಿರುವರು. ಗೋಕಟ್ಟೆಗಳು ನಿರ್ಮಾಣವಾಗಿವೆ. ಹೊಸ ರಸ್ತೆಗಳಾಗಿವೆ. ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟಿದ್ದಾರೆ. ಗ್ರಾಮದ ಅಭಿವೃದ್ಧಿ ಕೆಲಸ ಮಾಡುವ ಸಂದರ್ಭದಲ್ಲಿ ಬಂದ ಅನೇಕ ಸಮಸ್ಯೆಗಳನ್ನು ಗ್ರಾಮಸ್ಥರು ತಮ್ಮಲ್ಲೇ ಬಗೆಹರಿಸಿಕೊಂಡಿರುವರು. ಇನ್ನೂ ಅನೇಕ ರೀತಿಯ ಅಭಿವೃದ್ಧಿ ಕಾರ್ಯಗಳು ನಡೆದಿವೆ. ವಿವಿಧ ಅಭಿವೃದ್ಧಿ ಇಲಾಖೆಗಳು ಈ ಕೆಲಸದಲ್ಲಿ ನೆರವು ನೀಡಿವೆ. ಈಗ 1967ರಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾರಂಭವಾದ ರಾಷ್ಟ್ರೀಯ ಸೇವಾ ಯೋಜನೆಗೂ ಮುನ್ನ ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ಗ್ರಾಮ ಸೇವಾ ಶಿಬಿರಗಳನ್ನು ನಡೆಸುತ್ತಿದ್ದುದು ಮೆಚ್ಚುವ ಸಂಗತಿ. 1954ರಿಂದ ಗ್ರಾಮ ಸೇವಾ ಶಿಬಿರಗಳನ್ನು ಸೇವಾದಳ ನಡೆಸಬೇಕೆಂದು ರಾಜ್ಯ ಸರಕಾರ ಅಭಿಪ್ರಾಯಪಟ್ಟಿತು. ಆದ್ದರಿಂದ ಸಮಿತಿ ಈ ಯೋಜನೆಯನ್ನು ಕೈಬಿಟ್ಟಿತು.

ಗ್ರಾಮ ಸೇವಾ ಶಿಬಿರಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಜೊತೆಗೆ ಆಯಾ ಗ್ರಾಮದ ಆರ್ಥಿಕ, ಸಾಮಾಜಿಕ ಸರ್ವೇಕ್ಷಣೆಯನ್ನು ಕೈಗೊಳ್ಳಲಾಗುತ್ತಿತ್ತು. ಬೆಳಿಗ್ಗೆಯಿಂದ ರಾತ್ರಿಯವರೆವಿಗೂ ನಿಗದಿಯಾದ ಕಾರ್ಯಕ್ರಮವಿತ್ತು. ಬೆಳಿಗ್ಗೆ ಪ್ರಾರ್ಥನೆಯಿಂದ ಪ್ರಾರಂಭವಾಗಿ ಪ್ರಭಾತದವರೆವಿಗೂ ನಡೆಯುತ್ತಿದ್ದವು. ಈ ಸಂದರ್ಭದಲ್ಲಿ ನಡೆದ ಪ್ರಸಂಗವೊಂದನ್ನು ವಿವರಿಸುವುದು ಒಳಿತು. ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಒಂದು ಹಳ್ಳಿಯಲ್ಲಿ ನಡೆದ ಪ್ರಸಂಗ ಅದು. ಆಲ್ಲೊಂದು ಗ್ರಾಮ ಸೇವಾ ಶಿಬಿರ ನಡೆಯಿತು. ಶಿಬಿರದ ಸಂಚಾಲಕರ ಪೈಕಿ ಒಬ್ಬ ಉಪಾಧ್ಯಾಯರು ಪ್ರತಿನಿತ್ಯ ರಾತ್ರಿ ವೇಳೆ "ಕುವೆಂಪು" ಅವರ ಜನಪ್ರಿಯ ವಾಲ್ಮೀಕಿ ರಾಮಾಯಣ ಓದಲು ಪ್ರಾರಂಭಿಸಿದರು. ಮೊದಲನೆಯ ದಿನ ರಾಮಾಯಣ ವಾಚನವನ್ನು ಕೇಳಲು ಹತ್ತಾರು ಮಂದಿ ಬಂದರು. ಮಾರನೆಯ ದಿನ ಹಳ್ಳಿಗರ ಪೈಕಿ ಒಬ್ಬ ಶಿಬಿರದ ಸಂಚಾಲಕರ ಹತ್ತಿರ ಬಂದು "ಏನು ಸ್ವಾಮಿ, ರಾಮಾಯಣ ಓದುವಿರಿ, ಆದರೆ ಒಂದು ರಾಮನ ಪಟವಿಲ್ಲ" ಎಂದು ಹೇಳಿ ತಾನು ತಂದಿದ್ದ ರಾಮನ ಪಟವನ್ನು ಅವರ ಕೈಗೆ ಕೊಟ್ಟನು. ಅಂದಿನಿಂದ ಪ್ರತಿನಿತ್ಯವೂ ರಾತ್ರಿ ರಾಮಾಯಣ ಓದುವ ವೇಳೆಯಲ್ಲಿ ರಾಮನ ಪಟವನ್ನು ಇಡುತ್ತಿದ್ದರು. ಭಕ್ತಾದಿಗಳ ಪೈಕಿ ಒಬ್ಬರು ಪ್ರತಿನಿತ್ಯ ಒಂದು ಜೊತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೊಡರನ್ನು ಹಚ್ಚಿ ರಾಮನ ಪಟದ ಮುಂದೆ ತಂದಿಡುತ್ತಿದ್ದರು. ಈ ತೆರನಾಗಿ ಒಂದೊಂದು ದಿನ ಒಬ್ಬೊಬ್ಬರು ದೇವರ ಕೈಂಕರ್ಯ ನಡೆಸಿಕೊಂಡು ಬಂದರು. ರಾಮಪಟ್ಟಾಭಿಷೇಕದ ಭಾಗವನ್ನು ಓದುವ ದಿನ ಬಂತು. ಅಂದು ಮನೆಗೊಂದು ತೆಂಗಿನಕಾಯಿ, ಒಂದು ಅಚ್ಚು ಬೆಲ್ಲ, ಹಲಸಿನ ಮರವಿದ್ದವರು ಒಂದು ಹಲಸಿನ ಹಣ್ಣು ತಂದು ದೇವರಿಗೆ ರಸಾಯನ ಮಾಡಿಸಿದರು. ಹೀಗೆ ಊರಿನವರೆಲ್ಲರೂ ಸೇರಿ ಬಹಳ ವಿಜೃಂಭಣೆಯಿಂದ ರಾಮ ದೇವರ ಮಂಗಳಾರತಿ ಮಾಡಿಸಿದರು. ಅಂದು ರಾತ್ರಿ ಮಂಗಳಾರತಿ ಆಗುವುದೇ ತಡ. ಆದೆಲ್ಲಿ ಕಾದಿತ್ತೋ ಎಲ್ಲೂ ಇಲ್ಲದ ಭಾರೀ ಮಳೆ ಬಂದಿತು. ಸುಮಾರು ಎರಡು ತಿಂಗಳಿಂದ ಮಳೆ ಇಲ್ಲದೆ ಊರಿನ ರೈತರು ಕಂಗಾಲಾಗಿದ್ದರು. ಮಳೆ ಅನಿರೀಕ್ಷಿತವಾಗಿ ಬಂದಿದ್ದು ಗ್ರಾಮಸ್ಥರಿಗೆ ಎಲ್ಲೂ ಇಲ್ಲದ ಆನಂದವನ್ನು ತಂದಿತು. ರಾಮನ ಕೃಪೆ ಎಂದು ಕೆಲವರು ನಿಟ್ಟುಸಿರು ಬಿಟ್ಟರು. ಹಲವರು ಭಗವಂತನನ್ನು ನೆನೆದು ಕೊಂಡಾಡಿದರು. ಪ್ರತಿನಿತ್ಯವೂ ರಾಮಾಯಣ ವಾಚನ ಮಾಡಿದ ಉಪಾಧ್ಯಾಯರನ್ನು ಮನಸಾರೆ ಕೃತಜ್ಞತೆಯಿಂದ ಹೊಗಳಿದರು. ಮರು ವರ್ಷ ರಾಮೋತ್ಸವದ ವೇಳೆಗೆ ಗ್ರಾಮಸ್ಥರು ರಾಮಮಂದಿರವನ್ನು ಕಟ್ಟಿ ಸಿದ್ಧಪಡಿಸಿದರು. ಸಮಾಜ ಶಿಕ್ಷಣ ಕಾರ್ಯಕರ್ತರು ಗ್ರಾಮಸ್ಥರನ್ನು ಸರಿಯಾದ ಮಾರ್ಗದಲ್ಲಿ ಒಯ್ಯುವುದು ಆಗತ್ಯ.

ಮೈಸೂರಿನ ಹತ್ತಿರ ಬೃಂದಾವನದಲ್ಲಿ(1949)ಯುನೆಸ್ಕೊ ವಯಸ್ಕರ ಶಿಕ್ಷಣದ ವಿಚಾರದಲ್ಲಿ ಒಂದು ವಿಚಾರ ಸಂಕಿರಣವನ್ನು ವ್ಯವಸ್ಥೆ ಮಾಡಿತಷ್ಟೆ. ಈ ವಿಚಾರ ಸಂಕಿರಣಕ್ಕೆ ಆಗ್ನೇಯ ಏಷ್ಯಾ ರಾಷ್ಟ್ರದ ಪ್ರತಿನಿಧಿಗಳು ಬಂದಿದ್ದರು. ಅವರಿಗೆ ಗ್ರಾಮೀಣ ಜನರ ಸಮಸ್ಯೆ ಮತ್ತು ಪರಿಹಾರ ಹಾಗೂ ಈ ಕಾರ್ಯದಲ್ಲಿ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಉದ್ದೇಶವಿತ್ತು. ಅದಕ್ಕಾಗಿ ಬೃಂದಾವನದ ಹತ್ತಿರ ಹುಲಿಕೆರೆಯಲ್ಲಿ ಒಂದು ಗ್ರಾಮ ಸೇವಾ ಶಿಬಿರ ಏರ್ಪಾಡಾಯಿತು. ಅನೇಕ ಪ್ರತಿನಿಧಿಗಳು ಗ್ರಾಮೀಣರ ಸಮಸ್ಯೆಗಳನ್ನು ಮತ್ತು ಅವುಗಳ ಪರಿಹಾರ ಮಾರ್ಗಗಳನ್ನು ಮನವರಿಕೆ ಮಾಡಿಕೊಂಡರು. ಹಾಗೂ ಶಿಬಿರದಲ್ಲಿ ನಡೆದ ಕೆಲಸ ಕಾರ್ಯಗಳನ್ನು ನೋಡಿ ಮೆಚ್ಚಿದರು.

ಪ್ರಕಟಣೆಗಳು

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಒಂದು ದೊಡ್ಡ ಪ್ರಕಾಶನ ಸಂಸ್ಥೆ. ಆದರೆ ಇತ್ತೀಚೆಗೆ ಹೊಸ ಪ್ರಕಟಣೆಗಳು ಹೊರ ಬರುತ್ತಿಲ್ಲ. ಸಮಿತಿ ಕೆಳಗೆ ಕಂಡಂತೆ ವಿವಿಧ ವರ್ಗದ ಪ್ರಕಟಣೆಗಳನ್ನು ಹೊರತಂದಿದೆ.

ಪ್ರಕಟಣೆಯ ಹೆಸರು		ಸಂಖ್ಯೆ
1)	ಪಠ್ಯಪುಸ್ತಕಗಳು	9
2)	ವಯಸ್ಕರ ಶಿಕ್ಷಣ ಮಾಲೆ	151
3)	ಪುಸ್ತಕ ಭಂಡಾರ ಮಾಲೆ	23
4)	ಜೇಪ ವಿಜ್ಞಾನ ಮಾಲೆ	1
5)	ಪೌರಾಣಿಕ ಸಾಹಿತ್ಯ ಮಾಲೆ	2
6)	ಭಾಷಾಂತರ ಮಾಲೆ	9
7)	ಬೆಳ್ಳಿ ಹಬ್ಬದ ಮಾಲೆ	2
8)	ಸಾಹಿತ್ಯ ರಚನಾಲಯ ಮಾಲೆ	73

ಚಲನಚಿತ್ರ ಪ್ರದರ್ಶನ

ಸಿನಿಮಾ ಚಿತ್ರಪ್ರದರ್ಶನ ಒಳ್ಳೆಯ ಸಾಮೂಹಿಕ ಮನರಂಜನೆ ಮಾಧ್ಯಮ. ಸಮಿತಿ 9 ದೃಕ್‌ಶ್ರವಣ ಘಟಕಗಳನ್ನು ಹೊಂದಿದೆ. ಎಲ್ಲ ವಾಹನಗಳು ಬಹಳ ಹಳೆಯವು. ಆದ್ದರಿಂದ ಅವುಗಳಿಂದ ಮೂರೆಯುವ ಸೇವೆಗಿಂತ ಹೆಚ್ಚಾಗಿ ಹಣ, ರಿಪೇರಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಖರ್ಚಾಗುತ್ತಿದೆ. ಆದ್ದರಿಂದ ಹೊಸ ವಾಹನಗಳ ಅಗತ್ಯ ಇದೆ.

ಸಮಿತಿ ಈರ-ಬೀರಿ, ಶಬರಿ, ನಮ್ಮ ಮೈಸೂರು, ಶಿವಾರ ಗುಡ್ಡ ವಿದ್ಯಾಪೀಠ, ದಾಸರಕೊಪ್ಪಲು ಗ್ರಾಮ ಸೇವಾ ಶಿಬಿರ-ಈ ಚಿತ್ರಗಳನ್ನು ತಯಾರಿಸಿದೆ. ಈರ-ಬೀರಿ ಸಾಕ್ಷರತೆಯನ್ನು ಒತ್ತಿ ಹೇಳುವ ಚಿತ್ರ. ಪಳೆಯ ಮೈಸೂರಿನ ಪ್ರೇಕ್ಷಣೀಯ ಸ್ಥಳ, ಕೈಗಾರಿಕೆ ಮುಂತಾದವುಗಳನ್ನು ತಿಳಿಸುವ ವರ್ಣರಂಜಿತ ಚಿತ್ರ "ನಮ್ಮ ಮೈಸೂರು."

ಗ್ರಾಮಕಲೆಗಳು

ಇವು ಗ್ರಾಮೀಣ ಜನರ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಮಾಧ್ಯಮಗಳು. ಜಾತಿ, ಮತ, ಪಂಥ ಹಾಗೂ ಪ್ರಾದೇಶಿಕ ವ್ಯತ್ಯಾಸಗಳಿಲ್ಲದೆ ಎಲ್ಲ ವರ್ಗದ ಜನರಿಗೆ ಮನರಂಜನೆ ನೀಡುವ ಹಾಗೂ ಅವರನ್ನು ಬೆಸೆಯುವ ಸಾಧನಗಳು. ಈ ಕಲೆಗಳನ್ನು ಬೆಳಕಿಗೆ ತಂದ ಕೀರ್ತಿ ವಯಸ್ಕರ ಶಿಕ್ಷಣ ಸಮಿತಿಗೆ ಸಲ್ಲಬೇಕು. ಒಂದು ಕಾಲಕ್ಕೆ ಈ ಕಲೆಗೆ ಸಂಬಂಧಪಟ್ಟ ಸಾಮಾನುಗಳನ್ನು ಸಂಗ್ರಹಿಸಿ ಪ್ರದರ್ಶಿಸಲಾಗಿತ್ತು. ಅವು ಇಂದು ಕಾಣುತ್ತಿಲ್ಲ. ಇತ್ತೀಚಿಗೆ ಮೈಸೂರು ವಿಶ್ವವಿದ್ಯಾನಿಲಯ ಗ್ರಾಮ ಕಲಾ ಸಾಮಾನುಗಳನ್ನು ಸಂಗ್ರಹಿಸಿ ಚೆನ್ನಾದ ಪ್ರದರ್ಶನಾಲಯವನ್ನು ಏರ್ಪಡಿಸಿದೆ. ಗ್ರಾಮ ಕಲೆಗಳ ಅಭಿವೃದ್ಧಿ ಕಾರ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತು ಕೈಕೊಂಡಿದೆ.

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಜಿಲ್ಲಾ ಮಟ್ಟದ ಗ್ರಾಮ ಕಲಾ ಪ್ರದರ್ಶನಗಳನ್ನು ಏರ್ಪಡಿಸುತ್ತಿತ್ತು. ಅವುಗಳಲ್ಲಿ ಉತ್ತಮವಾದವುಗಳನ್ನು ರಾಜ್ಯ ಮಟ್ಟದಲ್ಲಿ ಬೆಳಕಿಗೆ ತರುತ್ತಿತ್ತು. ಈಗ ಹಲವಾರು ವರ್ಷಗಳಿಂದ ಈ ಕಾರ್ಯಕ್ರಮ ನಿಂತು ಹೋಗಿದೆ. ಗ್ರಾಮಕಲೆಗಳ ಉದ್ಧಾರಕ್ಕೆ ಒಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಕಾಡೆಮಿ ಮಾಡಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತು ಪ್ರಯತ್ನಿಸುತ್ತಿದೆ.

ಜನತಾ ಶಿಕ್ಷಣ ಕೇಂದ್ರಗಳು

ಗ್ರಾಮದ ಏಳಿಗೆಗೆ ಆಯಾ ಗ್ರಾಮಸ್ಥರೇ ಮುಂದೆ ಬಂದು ದುಡಿಯಬೇಕು. ಈ ಕೆಲಸ ಮಾಡಲು ಅವರಲ್ಲಿ ಒಗ್ಗಟ್ಟು ಮತ್ತು ಹೊಂದಾಣಿಕೆ ಅಗತ್ಯ. ಈ ಒಳ್ಳೆಯ ಗುಣಗಳನ್ನು ಬೆಳೆಸಲು ಜನತಾ ಶಿಕ್ಷಣ ಕೇಂದ್ರಗಳು ಶ್ರಮಿಸುವುವು. ವಯಸ್ಕರಿಗೆ ಜೀವನದ ಸತ್ಯ ದರ್ಶನ ಮೂಡಿಸುವುದರಲ್ಲಿ ಜನತಾ ಶಿಕ್ಷಣ ಕೇಂದ್ರಗಳು ನೆರವಾಗಿವೆ.

ವಾರಕ್ಕೊಂದು ದಿನ ಗ್ರಾಮಸ್ಥರೆಲ್ಲರೂ ಸಭೆ ಸೇರುವರು. ಗ್ರಾಮದ ಸಮಸ್ಯೆಗಳನ್ನು ಚರ್ಚಿಸುವರು ? ಪ್ರತಿ ಸೋಮವಾರ ಶ್ರಮದಾನ ಕಾರ್ಯ ನಡೆಯುವುದು. ಗ್ರಾಮಸ್ಥರು ಈ ತೆರನಾದ ಊರೊಟ್ಟಿನ ಕೆಲಸದಲ್ಲಿ ಪಾಲುಗೊಳ್ಳುವರು. ಆಗಾಗ್ಗೆ ತಜ್ಞರಿಂದ ಭಾಷಣಗಳು ನಡೆಯುವುವು. ಭಾರತ ವಾಚನ ಮತ್ತು ಜಾನಪದ ಕಲೆಗಳ ಪ್ರದರ್ಶನವು ನಡೆಯುವುದು.

ಸಮಗ್ರ ವಯಸ್ಕರ ಶಿಕ್ಷಣ ಯೋಜನೆ

ಸೇವಾ ಮನೋಭಾವವುಳ್ಳ ಸ್ವಯಂಸೇವಕರ ಸಹಕಾರ ಪಡೆದು ಗ್ರಾಮಾಂತರ ಪ್ರದೇಶಗಳಲ್ಲಿ ಸಮಗ್ರ ವಯಸ್ಕರ ಶಿಕ್ಷಣ ಯೋಜನೆಯನ್ನು ಕೈಕೊಳ್ಳುವುದು ಈ ಯೋಜನೆಯ ಗುರಿ. ಈ ಕಾರ್ಯಕ್ರಮ ಕೈಕೊಳ್ಳಲು ಗ್ರಾಮಕ್ಕೆ ಪೂರ್ಣ ಕಾಲದ ಕೆಲಸಗಾರರನ್ನು ನೇಮಿಸಲಾಗುವುದು. ಅವರ ಗಮನವೆಲ್ಲಾ ಜನತಾ ಶಿಕ್ಷಣ ಕೇಂದ್ರದ ಗುರಿಯನ್ನು ಸಾಧಿಸಲು ಹರಿಯುವುದು. ಈ ಕಾರ್ಯಕ್ರಮಕ್ಕೆ ಬೇಕಾದ ಸಹಕಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತು ಬಂಡವಾಳವನ್ನು ಗ್ರಾಮಸ್ಥರ ಸಹಕಾರದಿಂದ ಸಂಚಾಲಕನು ಸಂಗ್ರಹಿಸುವನು. ಈ ಕೇಂದ್ರಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಜೊತೆಗೆ, ವಯಸ್ಕರ ಶಿಕ್ಷಣ ಕಾರ್ಯಕ್ರಮಗಳೂ ಸಹ ನಡೆಯುವುವು. ಒಟ್ಟಿನಲ್ಲಿ ಗ್ರಾಮಗಳ ಸಾಮಾಜಿಕ ಸಾಂಸ್ಕೃತಿಕ ಅಭಿವೃದ್ಧಿ ಕಾರ್ಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಲಾಗುವುದು. ಈ ಪ್ರಯೋಗ ಕೆಲವು ಕಾಲ ಮಂಡ್ಯ ಜಿಲ್ಲೆಯಲ್ಲಿ ನಡೆದು ನಿಂತು ಹೋಯಿತು. ದಕ್ಷರಾದ ಕಾರ್ಯಕರ್ತರ ಮತ್ತು ಹಣದ ಅಭಾವ ಇದಕ್ಕೆ ಕಾರಣ.

ಸಂಶೋಧನೆ

ಸಮಿತಿಯ ಕಾರ್ಯಕ್ರಮಗಳ ಯಶಸ್ಸಿಗೆ ಮೌಲ್ಯಮಾಪನೆಯ ಹಿನ್ನೆಲೆಯಲ್ಲಿ ಸಮಿತಿಯು ತನ್ನ ಕಾರ್ಯಕ್ರಮಗಳನ್ನು ಸನ್ನಿವೇಶಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಬಹುದು. ಸಮಿತಿಯು ಆಗಿಂದಾಗ್ಗೆ ಪಠ್ಯಪುಸ್ತಕಗಳನ್ನು ಪರಿಷ್ಕರಿಸುತ್ತಿದೆ. ರೈತರಿಗೆ ಹೆಚ್ಚು ಬೆಳೆ ಬೆಳಿ ಎಂಬ ಕ್ರಿಯಾತ್ಮಕ ಸಾಕ್ಷರತಾ ಯೋಜನೆಗೆ ಅನುಕೂಲವಾಗುವಂತೆ ಈ ಗ್ರಂಥಕರ್ತರು ಒಂದು ಪಠ್ಯಪುಸ್ತಕ ರಚಿಸಿಕೊಟ್ಟಿರುವರು. ಕ್ರಿಯಾತ್ಮಕ ಸಾಕ್ಷರತೆಗೆ ಪೂರಕ ಸಾಹಿತ್ಯ ರಚಿಸುವ ಬಗ್ಗೆ 1968ರಲ್ಲಿ ಬ್ಯಾಂಕಾಕ್ ನಲ್ಲಿ 18 ದಿನಗಳ ಕಾಲ ಯುನೆಸ್ಕೊ ಕಾರ್ಯಾಗಾರ ನಡೆಸಿತು. ಈ ಕಾರ್ಯಾಗಾರ ಬಹು ಪ್ರಯೋಜನಕಾರಿಯಾಗಿತ್ತು. ಈ ಕಾರ್ಯಾಗಾರದಲ್ಲಿ ಸಮಿತಿಯ ಸಂಶೋಧಕರಾಗಿದ್ದ ಈ ಗ್ರಂಥಕರ್ತರು ಭಾರತದ ಪರವಾಗಿ ಭಾಗವಹಿಸಿದ್ದರು.

ಅಖಿಲ ಭಾರತ ಶೈಕ್ಷಣಿಕ ಸಂಶೋಧನಾ ಮಂಡಳಿಯ ನೆರವಿನಿಂದ ಪದಪಟ್ಟಿ ಮತ್ತು ವಯಸ್ಕರ ವಾಚನಾಭಿರುಚಿಗಳ ಬಗ್ಗೆ ಸಂಶೋಧನೆ ನಡೆದಿದೆ. ಲಕ್ನೋ ಸಾಕ್ಷರತಾ ನಿಕೇತನ

Sri Vidyabharathi Book Centre, Sringeri

CC-O. In Public Domain. Digitized by eGangotri

ದವರ ಸಹಾಯದಿಂದ ಈ ಗ್ರಂಥಕರ್ತರು ನಯಾಸವೇರ ಪದ್ಧತಿಯ ರೀತ್ಯ ರಚಿಸಿದ ವಯಸ್ಕರ ಪಠ್ಯಪುಸ್ತಕದ ಮೌಲ್ಯ ಮಾಪನೆ ಆಗಿದೆ. ಕಾರ್ಯಕರ್ತರಿಗೆ ಆಗಾಗ್ಗೆ ತರಬೇತು ನಡೆಸುವುದು ಸಂಶೋಧನಾ ಶಾಖೆಯ ಜವಾಬ್ದಾರಿ. ರಾಜ್ಯ ಸಂಪನ್ಮೂಲ ಕೇಂದ್ರ ಸ್ಥಾಪನೆಯಾದ ನಂತರ ಸಂಶೋಧನಾ ಇಲಾಖೆಯ ಕಾರ್ಯಕರ್ತರನ್ನು ಸಂಪನ್ಮೂಲ ಕೇಂದ್ರಕ್ಕೆ ವರ್ಗಾಯಿಸಲಾಗಿದೆ.

ಆಡಳಿತ

ಇದೊಂದು ಖಾಸಗಿ ಸಂಸ್ಥೆ. ಕಾನೂನಿನ ಪ್ರಕಾರ ರಿಜಿಸ್ಟರಾಗಿದೆ. ಇದು ತನ್ನದೇ ಆದ ಆಂಗ ರಚನೆಯನ್ನು ಹೊಂದಿದೆ. ಸರಕಾರ ಯಾವಾಗ ಬೇಕಾದರೂ ಸೂಕ್ತ ಸೂಚನೆಗಳನ್ನು ಸಮಿತಿಗೆ ನೀಡುವ ಅಧಿಕಾರ ಆಂಗ ರಚನೆಯಲ್ಲಿ ಅಡಕವಾಗಿದೆ. ರಾಜ್ಯ ಸರಕಾರ ಶೇಕಡ 100 ಭಾಗ ಅನುದಾನ ನೀಡುತ್ತಿದೆ. 1980-81ನೆಯ ಸಾಲಿಗೆ ಸರಕಾರ ನೀಡಿರುವ ಅನುದಾನದ ಮೊತ್ತ 28 ಲಕ್ಷ ರೂಪಾಯಿಗಳು.

ಪ್ರತಿಜಿಲ್ಲೆಯಲ್ಲೂ ಸಹ ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಗಳು ಸ್ಥಾಪಿತವಾಗಿವೆ. ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷ ಜಿಲ್ಲಾಧಿಕಾರಿಗಳು. ಈ ಸಮಿತಿಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಿದರೆ ಗುರಿ ಸಾಧಿತವಾಗುತ್ತದೆ. ಒಂದು ಕಾಲಕ್ಕೆ ಪ್ರತಿ ಜಿಲ್ಲಾ ಸಮಿತಿಗೆ ಒಬ್ಬೊಬ್ಬ ಗೌರವ ಕಾರ್ಯದರ್ಶಿ ಇದ್ದರು. ಈಗ ಅವರಿಲ್ಲ.

ಕೇಂದ್ರ ಸಮಿತಿಯಲ್ಲಿ ಖಾಸಗಿ ಮಹನೀಯರು ಮತ್ತು ಸರಕಾರದಿಂದ ನೇಮಿತರಾದ ಸದಸ್ಯರು ಇರುವರು. ಸಮಿತಿಯ ಆಂಗ ರಚನೆಯ ಪ್ರಕಾರ ಪ್ರಾರಂಭದಲ್ಲಿ ಚುನಾಯಿತ ಅಧ್ಯಕ್ಷ

Sri Vidyabharathi Book Centre, Sringeri

CC-O. In Public Domain. Digitized by eGangotri

ರನ್ನು ಮತ್ತು ಪ್ರಧಾನ ಕಾರ್ಯದರ್ಶಿಯನ್ನು ಹೊಂದಲು ಅವ ಕಾಶವಿತ್ತು. ರಾಜ್ಯ ಸರಕಾರ ಸಮಿತಿಯ ಮೇಲೆ ಹತೋಟಿ ಪಡೆಯಲು 1965ರಿಂದ ಈಚೆಗೆ ಅಧ್ಯಕ್ಷರನ್ನು ನಾಮಕರಣ ಮಾಡುತ್ತಿದೆ.

ವಯಸ್ಕರ ಶಿಕ್ಷಣ ಇಲಾಖೆ

ವಯಸ್ಕರ ಶಿಕ್ಷಣ ಇಲಾಖೆ ಆರಂಭವಾದದ್ದು 1978ರಲ್ಲಿ. ಇದಕ್ಕೆ ಮುಂಚೆ ಇಲಾಖೆಯ ಕೆಲಸ,— ಎಂದರೆ ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದ ಕೆಲಸ—ಸಾರ್ವಜನಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲೇ ಇತ್ತು.

'ವಯಸ್ಕರ ಶಿಕ್ಷಣ'ದ ಕಾರ್ಯವನ್ನು ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ನಡೆಸಿಕೊಂಡು ಬರುತ್ತಿತ್ತು. ಸಾರ್ವಜನಿಕ ಶಿಕ್ಷಣ ಇಲಾಖೆ ಸಮಿತಿಗೆ ಅನುದಾನ ಕೊಡುತ್ತ, ಸಮಿತಿಯ ಕಾರ್ಯಕಲಾಪಗಳನ್ನು ಸಮೀಕ್ಷಿಸುತ್ತಿತ್ತು.

1978ರಲ್ಲಿ ಕೇಂದ್ರ ಸರಕಾರ ವಯಸ್ಕರ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿತು. ಆದಕ್ಕಾಗಿ ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯೊಂದನ್ನು ನಿರೂಪಿಸಿತು. ಈ ಯೋಜನೆಯನ್ನು ಅದೇ ವರ್ಷ ಕಾರ್ಯರೂಪಕ್ಕೆ ಇಳಿಸಿತು. ಈ ಯೋಜನೆ ಭಾರತದ ಎಲ್ಲ ರಾಜ್ಯಗಳಿಗೂ ಅನ್ವಯಿಸುವಂತಹ ದಾಗಿತ್ತು. ಇದನ್ನು ಸಂಘಟಿಸಲು ಪ್ರತಿ ರಾಜ್ಯದಲ್ಲಿಯೂ ಸರಕಾರದ ಒಂದು ಇಲಾಖೆ ಇರತಕ್ಕದ್ದು ಅವಶ್ಯಕವಾಯಿತು.

ಅಖಿಲಭಾರತ ನೀತಿಯನ್ನನುಸರಿಸಿ ಕರ್ನಾಟಕದಲ್ಲೂ ಒಂದು ಇಲಾಖೆ ಸ್ಥಾಪಿತವಾಯಿತು.

ಇಲಾಖೆಗೆ ಒಬ್ಬರು ನಿರ್ದೇಶಕರಿರುತ್ತಾರೆ. ಈ ಹೊಸ ಇಲಾಖೆ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯದಿಂದ ಆಡಳಿತ

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ಪ್ರವೇಶಿಸುವುದಿಲ್ಲ. ಸಮಿತಿ ರಾಜ್ಯಮಟ್ಟದ ಸಲಹಾ ಮಂಡಲಿಯಂತೆ ಕೆಲಸ ಮಾಡುತ್ತದೆ. ಅನೇಕ ವರ್ಷಗಳಿಂದ ಅದು ಕೆಲಸ ಮಾಡುತ್ತಿದೆ. ಅಲ್ಲದೆ ಈ ಶಿಕ್ಷಣ ಕಾರ್ಯವನ್ನು ಅನೇಕ ಸ್ವಯಂಸೇವಾ ಸಂಸ್ಥೆಗಳು, ನೆಹರು ಯುವಕ ಕೇಂದ್ರ ಗಳು, ವಿಶ್ವವಿದ್ಯಾನಿಲಯಗಳು ನಿರ್ವಹಿಸುತ್ತಾ ಬಂದಿವೆ. ಈ ಎಲ್ಲ ಸಂಸ್ಥೆಗಳ, ಸಮಿತಿಗಳ ಕಾರ್ಯವೀಕ್ಷಣೆ, ಅವುಗಳ ಕಾರ್ಯ ಸಮನ್ವಯ, ಮತ್ತೆ ಅವುಗಳಿಗೆ ಮಾರ್ಗದರ್ಶನ ಇಲಾಖೆಯ ಹೊಣೆಯಾಗಿದೆ. ಅಲ್ಲದೆ ಇಲಾಖೆ ತಾನೂ ನೇರವಾಗಿ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ತೆರೆದು ನಡೆಸಲೂಬಹುದು.

ಇಲಾಖೆ ತನ್ನ ಆಡಳಿತ ನಿರ್ವಹಣೆಗಾಗಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳನ್ನು ಹೊಂದಿದೆ. ಅವರ ಕೆಲಸ ಕಾರ್ಯ ವೀಕ್ಷಣೆ ಮತ್ತು ಇಲಾಖೆಯ ಇತರ ಉದ್ದೇಶಗಳನ್ನು ಕಾರ್ಯ ಗತ ಗೊಳಿಸುವುದು. ಈಗ ಹದಿಮೂರು ಜಿಲ್ಲೆಗಳಲ್ಲಿ ಶಿಕ್ಷಣಾಧಿ ಕಾರಿಗಳು ಕೆಲಸ ಮಾಡತ್ತಿದ್ದಾರೆ.

ವಯಸ್ಕರ ಶಿಕ್ಷಣ ಇಲಾಖೆ ಈಗಾಗಲೆ ಒಂಬತ್ತು ಜಿಲ್ಲೆ ಗಳಲ್ಲೂ ಸಮಿತಿಯ ವ್ಯಾಪ್ತಿಯ ಹೊರಗೆ 300 ಕೇಂದ್ರಗಳ ಒಂದೊಂದು ಪ್ರಾಜೆಕ್ಟನ್ನು ಪ್ರಾರಂಭಿಸಿದೆ. ಬೀದರ್ ಜಿಲ್ಲೆಯಲ್ಲಿ ಒಂದುನೂರು ಕೇಂದ್ರಗಳ ಒಂದು ಪ್ರಾಯೋಗಿಕ ಕೇಂದ್ರ ವನ್ನು ಆರಂಭಿಸಿದೆ. ಸ್ವಯಂಸೇವಾ ಸಂಸ್ಥೆಗಳು ನಡೆಸುತ್ತಿರುವ ವಯಸ್ಕರ ಶಿಕ್ಷಣ ಕಾರ್ಯಗಳಿಗೆ ಕೇಂದ್ರ ಸರಕಾರ ಧನ ಸಹಾಯ ನೀಡುತ್ತದೆ. ಇದರ ಮೇಲ್ವಿಚಾರಣೆ ಇಲಾಖೆಗೆ ಸೇರಿದೆ.

ಇದಲ್ಲದೆ ನಗರದಲ್ಲಿ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ 'ಶ್ರಮಿಕ ಪೀಠ'ವೆಂಬ ಪ್ರತ್ಯೇಕ ಸಂಸ್ಥೆಯನ್ನು ಕೇಂದ್ರ ಸರಕಾರದ ಆರ್ಥಿಕ ನೆರವಿನಿಂದ ಪ್ರಾರಂಭಿಸಲಾಗಿದೆ. ಇಂತಹ

CC-O. In Public Domain. Digitized by Sri Vijayabharathi Bangalore Collection

CC-O. In Public Domain. Digitized by eGangotri

ಸಂಸ್ಥೆಗಳ ಕಾರ್ಯಗಳು ನೇರವಾಗಿ ಇಲಾಖಾ ನಿರ್ದೇಶಕರ ಮೇಲ್ವಿಚಾರಣೆಯಲ್ಲಿ ನಡೆಯುತ್ತವೆ. ಈಗಾಗಲೇ ಮೂರು ತರಬೇತಿ ಕೇಂದ್ರಗಳು ಕೆಲಸಮಾಡುತ್ತಿವೆ. ಕ್ರಿಯಾಶೀಲ ಯುವಕ ನಿರ್ದೇಶಕರಾದ ಶ್ರೀ ವಿಠಲ ರೈ ಅವರ ಸ್ಫೂರ್ತಿದಾಯಕ ನೇತೃತ್ವದಲ್ಲಿ ತೀವ್ರಗತಿಯಿಂದ ವಯಸ್ಕರ ಶಿಕ್ಷಣ ಚಳುವಳಿಯೇ ನಡೆಯುತ್ತಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಬಂಧ

ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ ಸಾಧನೆ (1979–80ರ ಪೂರ್ತಾ)

1) ವಯಸ್ಕರ ಶಿಕ್ಷಣ ಕೇಂದ್ರಗಳು	88,005
2) ಅಕ್ಷರಸ್ಥರಾದ ವಯಸ್ಕರು	11,05,610
3) ವಿದ್ಯಾಮಂದಿರಗಳು	85,734
4) ಗ್ರಾಮೀಣ ಗ್ರಂಥಾಲಯಗಳು	2,714
5) ಕೇಂದ್ರ ಪುಸ್ತಕ ಭಂಡಾರಗಳು	12
6) ಕ್ಷೇತ್ರೀಯ ,,	48
7) ಪ್ರಕಟಣೆಗಳು ,,	285
8) ವಿದ್ಯಾಪೀಠಗಳು (ಮಹಿಳಾ ವಿದ್ಯಾಪೀಠ 2)	12
9) ತರಬೇತು ಪಡೆದವರು 683 ಮಹಿಳೆಯರು 6928 ಗಂಡಸರು	7,611
10) ಚಲನಚಿತ್ರ ಘಟಕಗಳು	9
11) ಚಲನಚಿತ್ರ ಪ್ರದರ್ಶನಗಳು	43,334
12) ಸರಕಾರದ ಅನುದಾನ (1979–80ನೇ ಸಾಲಿನವರೆಗೆ)	ರೂ. 3,53,82,412
13) ಇತರ ಮೂಲಗಳಿಂದ ಆದಾಯ ,,	ರೂ. 85,30,515
14) ವೆಚ್ಚ	ರೂ. 4,31,82,216

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri